www.divinegen.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 8 ಸಂಚಿಕೆ - 9 ಸೆಪ್ಟಂಬರ್ 2012
Volume : VIII Issue : IX September 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಎಚ್ಚರವಾಗಿರು – ವಯಸ್ಕರ ಸ್ವರ
3. ದೇವರ ಪ್ರೀತಿಯ ಆಳ
4. ಪ್ರಶ್ನೋತ್ತರಗಳ ಸ್ವರ
5. ಆರೋಗ್ಯ ಸ್ವರ
6. ಸ್ಥಳೀಯ ಮತ್ತು ವಿದೇಶ ಸುದ್ಧಿ
7. ಸಾಕ್ಷಿಯ ಸ್ವರ
8. ಅನಾಥರ ಸ್ವರ
9. ಲಗಿನ್
10. ಪ್ರಾರ್ಥನಾ ಮನವಿಗಳು
11. ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ
12. ರೂತಳ ಪುಸ್ತಕ
13.. TESTIMONY
14. ಪುನರ್‌ಸ್ಥಾಪನೆ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕಿಸ್ತನ ಪವಿತ್ರ ನಾಮದಲ್ಲಿ ಪ್ರಿಯ ದೇವರ ಸ್ವರ ವಾಚಕರೆಲ್ಲರಿಗೂ ವಂದನೆಗಳು. ನಿನ್ನೆ ಈ ಹೊತ್ತು ನಿರಂತರೂ ಇರುವ ಯೇಸುಕ್ರಿಸ್ತನು ನಮ್ಮೊಂದಿಗೆ ಇರುವುದಕ್ಕಾಗಿ ಸ್ತೋತ್ರ.

ಈ ವರ್ಷದ ಅರ್ಧ ಭಾಗಕ್ಕಿಂತಲೂ ಹೆಚ್ಚು ಈಗಾಗಲೇ ಮುಗಿಸಿದ್ದೇವೆ. ದಿನಗಳೂ ಬೇಗನೆ ಓಡುತ್ತಾ ಇವೆ. ಕರ್ತನ ಸುವಾರ್ತೆಯು ಇನ್ನೂ ಎಷ್ಟೋ ಕಡೆಗಳಲ್ಲಿ ತಲುಪಲಿಲ್ಲ. ಇನ್ನು ಎಷ್ಟೋ ಜನರು ಸುವಾರ್ತೆ ಕೇಳಬೇಕಾಗಿದೆ. ಭಾರತ ದೇಶದಲ್ಲಿ ಸುವಾರ್ತೆ ಸೇವೆಗಾಗಿ ಅನೇಕ ಅಡ್ಡಿಗಳಿದ್ದರೂ ಕೂಡ ಕರ್ತನಾದ ಯೇಸುಕ್ರಿಸ್ತನ ಕೃಪೆಯಿಂದ ಸುವಾರ್ತೆ ಸೇವೆಯು ಪ್ರಬಲವಾಗಿ ಸಾರಲ್ಪಡುತ್ತಾ ಇದೆ. ನಾವು ಸುವಾರ್ತೆಯನ್ನು ಸಾರದೇ ಇರುವುದಕ್ಕಾಗಿ ಯಾವುದೇ ನೆವಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಜ್ಞಾನೋ. 22:13 ಹೇಳುತ್ತದೆ, **"ಹೊರಗೆ ಸಿಂಹವಿದೆ, ನನ್ನನ್ನು ಬೀದಿಯಲ್ಲಿ ಕೊಂದೀತು ಎಂಬುದು ಸೋಮಾರಿಯು ನೆವ"** ನಾವು ದೇವರ ರಾಜ್ಯದ ಸುವಾರ್ತೆ ಸೇವೆಯಲ್ಲಿ ಸೋಮಾರಿಗಳಾಗಿರದೇ ಕಷ್ಟಪಟ್ಟು ಸುವಾರ್ತೆ ಸೇವೆಯನ್ನು ಮಾಡೋಣ. ಜ್ಞಾನೋ. 10:5 ಹೇಳುತ್ತದೆ, ಸುಗ್ಗಿಯಲ್ಲಿ ಕೂಡಿಸುವವನು ಬುದ್ಧಿವಂತನು; ಕೊಯ್ಲಿನಲ್ಲಿ ತೂಕಡಿಸುವವನು ನಾಚಿಕೆಗೆಟ್ಟವನು. ಕರ್ತನಾದ ಯೇಸುಕ್ರಿಸ್ತನು ಒಂದು ಮಾತನ್ನು ಹೇಳಿದನು. **"ನೀವು ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ. ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ; ಅವನು ನಿತ್ಯಜೀವಕ್ಕೆ ಫಲವನ್ನು ಕೂಡಿಸಿಡುತ್ತಾನೆ; ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವದು."** (ಯೋಹಾ. 4:35-36). ದೇವರ ಸ್ವರ ಮಾಸ ಪತ್ರಿಕೆಯ ಮೂಲಕ ದೇಶ ವಿದೇಶಗಳಲ್ಲಿರುವ ಜನರಿಗೆ ಸುವಾರ್ತೆಯು ಮುಟ್ಟುತ್ತಿರುವುದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ ಮತ್ತು ಅನೇಕ ಕ್ರೈಸ್ತ ವಿಶ್ವಾಸಿಗಳು ಕೂಡಾ ಆತ್ಮೀಕ ಪ್ರಯೋಜನವನ್ನು ಹೊಂದಿರುವುದಾಗಿ ಫೋನ್ ಕರೆ ಮೂಲಕ, ಪತ್ರದ ಮೂಲಕ ತಿಳಿಸಿರುತ್ತಾರೆ. ಈ ಮಾಸ ಪತ್ರಿಕೆಯ ಸೇವೆಯನ್ನು ನಿಮ್ಮ ಪ್ರಾರ್ಥನೆಗಳಲ್ಲಿ ಎತ್ತಿ ಹಿಡಿಯಬೇಕಾಗಿ ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

ಕರ್ತನು ನಿಮ್ಮೆಲ್ಲರನ್ನೂ, ನಿಮ್ಮ ಕುಟುಂಬಗಳನ್ನೂ, ಸಭೆಯನ್ನೂ ಆಶೀರ್ವದಿಸಲಿ, ಆಮೆನ್.



*ಹಿರಿಯ ಸಂಪಾದಕ*
**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಪುನರುತ್ಥಾನ ಹೊಂದಿದ ಕ್ರಿಸ್ತನ ಸಂದೇಶ

1) ಪುನರುತ್ಥಾನ ಶರೀರವು ಕೇವಲ ಆತ್ಮವಲ್ಲ, ದೇಹದಿಂದ ಕೂಡಿರುತ್ತದೆ. ಯೋಬ. 19:25–27 ರಲ್ಲಿ **ನಾನಂತು ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು; ಆತನು ಕಡೆಗೆ ದೂಳಿನ ಮೇಲೆ ಸಾಕ್ಷಿಯಾಗಿ ನಿಂತುಕೊಳ್ಳುವನು; ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹನಾಗಿ ದೇವರನ್ನು ನೋಡುವೆನು; ಕಣ್ಣಾರೆ ಕಾಣುವೆನು, ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ. ನನ್ನ ಹೃದಯವು** [ಹಂಬಲಿಕೆಯಿಂದ] ನನ್ನಲ್ಲಿ ಕುಂದಿದೆ. **"ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ. ಆತ್ಮ ದೇಹ ಎರಡನ್ನು ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ"** (ಮತ್ತಾ. 10:28).

**"ಅದಕ್ಕೆ ಆಶ್ಚರ್ಯಪಡಬೇಡಿರಿ; ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು"** (ಯೋಹಾ. 5:28–29).

**ಪುನರುತ್ಥಾನ ಶರೀರದ ಸ್ವಭಾವವನ್ನು ನೋಡೋಣ :** 1 ಕೊರಿ. 15:35–42 ಸತ್ತವರು ಹೇಗೆ ಎಬ್ಬಿಸಲ್ಪಡುತ್ತಾರೆ ಎಂಥ ದೇಹದಿಂದ ಬರುತ್ತಾರೆ ಎಂದು ಒಬ್ಬನು ಕೇಳನೂ ಮಾಡನು ನೀನು ಬಿತ್ತುವ ಬೀಜವು ಸಾಯದಿದ್ದರೆ ಜೀವಿತವಾಗುವುದಿಲ್ಲ ನೋಡು ಒಂದೊಂದು ಬೀಜಕ್ಕೆ ಅದರದರ ಬೀಜವನ್ನು ಕೊಡುತ್ತಾನೆ. ಪರಲೋಕದ ದೇಹಗಳುಂಟು ಆದರೆ ಪರಲೋಕದ ದೇಹದ ಮಹಿಮೆ ಬೇರೆ, ಭೂಲೋಕದ ಮಹಿಮೆ ಬೇರೆ. ಪುನರುತ್ಥಾನ ಎಂದರೆ ಮನುಷ್ಯನು ಸತ್ತಾಗ ಹಳೆಯ ನಾಶವಾದ ಶರೀರ ಪುನರ್‌ನಿರ್ಮಾಣ ಮಾಡುವುದಲ್ಲ ಸಂಪೂರ್ಣವಾಗಿ ನೂತನ ಮಾಡುವುದಾಗಿದೆ. ಅಪೋಸ್ತಲನಾದ ಪೌಲನು ಹೇಳುವಂತದ್ದು ಬಿತ್ತಲ್ಪಟ್ಟ ಬೀಜದಿಂದ ಸಸ್ಯ ಮೊಳೆತು ನಂತರ ಹೂಬಿಡುತ್ತದೆ. ಆ ಹೂವು ಬಿತ್ತಿದ ಬೀಜಕ್ಕಿಂತ ಅನೇಕ ರೀತಿಯಲ್ಲಿ ವಿಭಿನ್ನವಾಗಿರುವಂತೆ ಮನುಷ್ಯರ ಪುನರುತ್ಥಾನದಲ್ಲಿಯೂ ನಾವು ಹೊಂದುವ ಹೊಸ ಶರೀರವು ಹಳೆಯ ಶರೀರಕ್ಕಿಂತ ಭಿನ್ನವಾಗಿರುತ್ತದೆ. ನೀವು ಪುನರುತ್ಥಾನ ಹೊಂದುವಾಗ ಆತ್ಮೀಕ ಶರೀರವಾಗಿದ್ದರೂ ನಿಮ್ಮನ್ನು ಗುರುತು ಹಿಡಿಯಬಹುದು. ಕರ್ತನಾದ ಯೇಸುಕ್ರಿಸ್ತನು ಪುನರುತ್ಥಾನ ಹೊಂದಿದಾಗ ಮಹಿಮೆಯ ಶರೀರ ಹೊಂದಿಕೊಂಡನು. ಅದರ ಬಗ್ಗೆ ನಾವು ಧ್ಯಾನ ಮಾಡಿದರೆ ಪುನರುತ್ಥಾನ ಶರೀರದ ವಾಸ್ತವಿಕತೆ ನಮಗೆ ತಿಳಿಯುತ್ತದೆ. ಪುನರುತ್ಥಾನಗೊಂಡ ಕ್ರಿಸ್ತನ ಶರೀರ ಮಾಂಸ ಎಲುಬಿನಿಂದ ಕೂಡಿತ್ತು (ಲೂಕ. 24:39). 1 ಕೊರಿ. 15:50 ರಲ್ಲಿ ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು; ಎಂದು ಓದುತ್ತೇವೆ. ಈ ಎರಡು ವಾಕ್ಯ ಓದುವಾಗ ನಮಗೆ ವ್ಯತ್ಯಾಸವಾಗಿ ಕಂಡರೂ ಇವೆರಡರ ಅರ್ಥ ಒಂದೇ ಆಗಿದೆ. 1 ಕೊರಿ. 15:50 ಕಾಣುವ ರಕ್ತ ಮಾಂಸ ಪ್ರಾಕೃತ ಶರೀರವು ಮಾಂಸ, ರಕ್ತದಿಂದ ಕೂಡಿದಂತೆ. ಪುನರುತ್ಥಾನ ಶರೀರವು ರಕ್ತರಹಿತ ಮಾಂಸದಿಂದ ಕೂಡಿರುತ್ತದೆ. ಇದು ಮಹಿಮೆಯಿಂದಲೂ ಪರಲೋಕಕ್ಕೆ ಸಂಬಂಧಪಟ್ಟದ್ದಾಗಿಯೂ ಇರುತ್ತದೆ.

4. ದೇವದೂತರ ಶರೀರದಂತಿರುತ್ತದೆ (ಮತ್ತಾ. 22:30, ಮಾರ್ಕ. 12:25).
5. ಪರಸ್ಪರ ಗುರುತಿಸಿಕೊಳ್ಳಬಹುದು (ಮತ್ತಾ. 17:1–8, ಲೂಕ. 9:28–32).
6. ನಿರ್ಲಯವಾದ ಶರೀರ (1 ಕೊರಿ. 15:42 ರೋಗ, ಮರಣ, ಶಾಪ ತಟ್ಟುವುದಿಲ್ಲ).
7. ಪ್ರಕೃತಿ ನಿಯಮಗಳಿಗೆ ಅತೀತವಾಗಿರುತ್ತದೆ (ಯೋಹಾ. 20:19–26, ಯೋಹಾ. 21:12–14).
8. ಆಹಾರವನ್ನು ಸೇವಿಸಬಹುದು (ಲೂಕ. 24:41–43).
9. ಮಾಂಸ ಹಾಗೂ ಎಲುಬಿನಿಂದ ಕೂಡಿರುತ್ತದೆ (ಲೂಕ. 24:39).
10. ಈ ಶರೀರವನ್ನು ಮುಟ್ಟಿ ನೋಡಬಹುದು (ಲೂಕ. 24:38, ಯೋಹಾ. 20:27).

ಇಗೋ ಬೇಗನೇ ಬರುತ್ತೇನೆ. ಈ ಪುಸಕ್ತದಲ್ಲಿ ಬರೆದಿರುವ ಪ್ರವಾದನೆಯ ಮಾತುಗಳನ್ನು ಕೈಗೊಂಡು ನಡೆಯುವವನು ಧನ್ಯನು ಎಂದು ಹೇಳಿದನು (ಪ್ರಕ. 1:4).

**ಪತ್ಮೊಸ್ ದ್ವೀಪ : (ಪ್ರಕ. 1:9–10). ಕ್ರಿಸ್ತನ ನಿಮಿತ್ತ : –** ಕ್ರಿಸ್ತನ ಕಾಲದ ಪ್ರಾರಂಭದ ನಂಬಿಕೆಯ ಎದುರಾಳಿಗಳು ಯೆಹೂದ್ಯರು. ಸ್ತೆಫನನ ಕೊಲ್ಲುವಿಕೆಯಿಂದ ಆರಂಭಿಸಿದ ಸೌಲನ ಪೀಡೆ ಆತನ ಮಾನಸಾಂತರದ ಕೊನೆಯಾಗಿತ್ತು.

ಅಂಜಬೇಡ; ನಿನ್ನನ್ನುದ್ಧರಿಸಲು ನಾನೇ ನಿನ್ನೊಂದಿಗಿರುವೆನು
(ಯೆರೆ. 1:8).

ಅದು ದೊಡ್ಡ ಪೀಡೆಗೆ ಮುಂಬರುವ ಶಾಂತತೆಯಾಗಿತ್ತು. ಅಪೋಸ್ತಲನಾದ ಯಾಕೋಬನು ಹೆರೋದನಿಂದ ಕೊಲ್ಲಲ್ಪಟ್ಟನು. ಅ.ಕೃ. 12:1–2 ಪೇತ್ರನು ಸೆರೆಮನೆಗೆ ಹಾಕಲ್ಪಟ್ಟನು. ರೋಮನ್ ಕ್ರೈಸ್ತರ ಎ.ಡಿ 64 ರಿಂದ ಅಕ್ರಮಣವನ್ನು ಆರಂಭಿಸಿದ್ದರು. **"ಕುರಿಯಾಸು"** ಎಂಬ ಪದದಿಂದ ಚಕ್ರವರ್ತಿ ವ್ಯವಹರಿಸುತ್ತಿದ್ದನು. ಆರಾಧನೆಗೆ ಪೀಠಗಳನ್ನು ನಿರ್ಮಿಸಿದನು. ಚಕ್ರವರ್ತಿ ನಿರೋವಿನ ಕಾಲದಲ್ಲಿ ಪೌಲ ಹೇಳಿದ ತಂದೆಯಾದ ಏಕ ದೇವರೆ ನಮಗಿರುವುದು. 2 ಕೊರಿ. 5–6 ಅಗಸ್ತಿನ್ ಕೈಸರನ ಕಾಲದಿಂದ ಆರಂಭಿಸಿದ ಚಕ್ರವರ್ತಿ ಆರಾಧನೆಯು ಡೋಮಿನಿನ್‌ನ ಕಾಲಕ್ಕೆ ನಮ್ಮ ದೇವರು ಹಾಗೂ ಕರ್ತನು ಡೊಮಿಟನೆನು ಎಂದು ಬರೆಯುತ್ತಿದ್ದರು. ನಂತರ ದೇವರೆಂದು ಆಜ್ಞಾಪಿಸಿದನು. ಕೈಸರ್ ದೇವರೆಂದು ಬದುಕು ಅಥವಾ ಕ್ರಿಸ್ತನು ದೇವರೆಂದು ಸಾಯು ಈ ರೀತಿಯ ಪರಿಸ್ಥಿತಿ ಇತ್ತು. ಈ ಕಾಲದಲ್ಲಿ ತದ್ದಾಯ ಎಂಬ ಶಿಷ್ಯನನ್ನು ಕೊಂದರು. ಅಂದ್ರೆಯ, ಫಿಲಿಪ್ಪ, ಯಾಕೋಬ,ಬಾರ್ತೊಲೊಮಾಯ, ಯಾಕೋಬ (ಕ್ರಿಸ್ತನ ಸಹೋದರ)ರನ್ನು ಕಲ್ಲೆಸೆದು ಕೊಂದರು. ಅಪೋಸ್ತಲ ಯೋಹಾನನನ್ನು ಗಡಿಪಾರು ಮಾಡಲಾಯಿತು. ನಮ್ಮ ಮರಣ ಹೇಗಾದರೂ ನಾವು ಕರ್ತನಲ್ಲಿ ಸಾಯಬೇಕು, ನಮ್ಮ ಮರಣದ ದಿವಸ ಕರ್ತನಿಗೆ ಗೊತ್ತು. ಪ್ರಕ. 1:10 ಕರ್ತನ ದಿನದಲ್ಲಿ ಆತ್ಮ ಪರವಶನಾದನು. ಹಳೆಒಡಂಬಡಿಕೆಯ ಕರ್ತನ ದಿನ ನ್ಯಾಯಾತೀರ್ಪಿನ ದಿನವಾಗಿದೆ. ಚೆಫ. 1:14–16. ಹೊಸ ಒಡಂಬಡಿಕೆಯ ಕರ್ತನ ದಿನ ಆರಾಧನೆಯ ದಿನವಾಗಿದೆ. ಇದು ಕರ್ತನು ಪುನರುತ್ಥಾನಗೊಂಡ ಭಾನುವಾರವಾಗಿದೆ ಹಾಗೂ ಆರಂಭದ ವಿಶ್ವಾಸಿಗಳು ಆರಾಧನೆಗಾಗಿ ಕೂಡಿ ಬರುತ್ತಿದ್ದ ವಾರದ ಮೊದಲನೆಯ ದಿನವಾಗಿದೆ. ಅ.ಕೃ. 20:7, 1 ಕೊರಿ. 16:2 ಯೋಹಾನನಿಗೆ ಈ ಸಮಯದಲ್ಲಿ 96 ವರ್ಷ ಪ್ರಾಯವಾಗಿತ್ತು. ಆತ್ಮವಶನಾದಾಗ

1. ದೇವರ ಸ್ವರ ಕೇಳಿದ. 2. ಕ್ರಿಸ್ತನನ್ನು ಕಂಡ. 3. ಸಭೆಯ ಅವಸ್ಥೆ ಕಂಡ. 4. ಅಡ್ಡಬಿದ್ದನು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

# ಎಚ್ಚರವಾಗಿರು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಎಚ್ಚರವಾಗಿರಿ, ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಲ್ಲಿರಿ. ಶೂರರಾಗಿರಿ, ಬಲಗೊಳ್ಳಿರಿ"** (1 ಕೊರಿ. 16:13).

ನಾವು ಪ್ರಯಾಣಿಸುವಾಗ ದಾರಿಗಳಲ್ಲಿ ಅಲ್ಲಲ್ಲಿ ಸೂಚನಾ ಫಲಕಗಳನ್ನು ಗಮನಿಸಬಹುದು ಮುಂದೆ ತಿರುವು ಇದೆ ಎಚ್ಚರಿಕೆ' **'ದಾರಿ ಕಿರಿದಾಗಿದೆ ಎಚ್ಚರಿಕೆ'** ಇನ್ನು ಕೆಲವೊಂದು ವಿದ್ಯುತ್‌ಕಂಬಗಳಿಗೆ 11.00v ಅಪಾಯ ಎಚ್ಚರಿಕೆ, ಇನ್ನು ಕೆಲವೊಂದು ದೊಡ್ಡ ದೊಡ್ಡ ಮನೆಗಳ ಗೇಟುಗಳ ಮೇಲೆ 'ನಾಯಿ ಇದೆ ಎಚ್ಚರಿಕೆ' ಎಂಬ ಸೂಚನಾ ಫಲಕಗಳು ನಮ್ಮನ್ನು ಎಚ್ಚರಿಸುವುದನ್ನು ನಾವು ಕಾಣಬಹುದಾಗಿದೆ. ಇದನ್ನು ಓದಿ ಯಾವ ಅಪಾಯ ಬರದಂತೆ ಎಚ್ಚರಿಕೆ ವಹಿಸಿಕೊಂಡು ಮುಂದೆ ನಾವು ಸಾಗುತ್ತೇವೆ ಅಲ್ಲವೇ? ಪ್ರಿಯ ದೇವ ಮಗುವೇ ಅದೇ ರೀತಿ ಸತ್ಯವೇದವು ಸಹ ನಮಗೆ ಅನೇಕ ವಿಷಯಗಳಲ್ಲಿ ಎಚ್ಚರವಾಗಿರು ಎಂದು ತಿಳಿಸುತ್ತದೆ. ನಾವು ಲೋಕದಲ್ಲಿ, ಪ್ರಯಾಣಗಳಲ್ಲಿ ನಮ್ಮ ದಿನ ನಿತ್ಯದ ಜೀವಿತದಲ್ಲಿ ಹೇಗೆ ನಾವು ಎಚ್ಚರಿಕೆ ವಹಿಸುತ್ತೇವೊ ಅದಕ್ಕಿಂತಲೂ ಹೆಚ್ಚಾಗಿ ಆತ್ಮೀಕ ಜೀವಿತದಲ್ಲಿ ಎಚ್ಚರವಾಗಿರಬೇಕಾಗಿದೆ.

**ಎಚ್ಚರಿಕ ಸ್ವರ**

ಸತ್ಯವೇದದಲ್ಲಿ ತಿಳಿಸಿರುವ ಕೆಲವೊಂದು ಎಚ್ಚರಿಕೆಯನ್ನು ನಾವು ತಿಳಿದುಕೊಳ್ಳೋಣ ಪ್ರಿಯರೇ,

**1) ಸೈತಾನನ ಕುರಿತಾಗಿ ಎಚ್ಚರಿಕೆ :** (1 ಪೇತ್ರ. 5:8) ಸತ್ಯವೇದವು ನಮ್ಮ ವೈರಿಯಾದ ಸೈತಾನನ ಕುರಿತಾಗಿ ಎಚ್ಚರಿಕೆ ವಹಿಸಲು ಸೂಚಿಸುತ್ತದೆ. ಸೈತಾನನು ನಮ್ಮನ್ನು ಆತನ ತಂತ್ರದಲ್ಲಿ ಬೀಳಿಸಲು ಶತಪ್ರಯತ್ನವನ್ನು ಮಾಡುವವನಾಗಿದ್ದಾನೆ. ನಾವು ಎಚ್ಚರಿಕೆ ವಹಿಸದಿದ್ದರೆ ಸುಲಭದಲ್ಲಿ ಆತನ ವಂಚನೆಗೆ ಒಳಬಿದ್ದು ನಮ್ಮ ಆತ್ಮೀಕ ಜೀವಿತವನ್ನು ನಷ್ಟಪಡಿಸುವರಾಗಿದ್ದೇವೆ. ಪೌಲನು ಬರೆಯುತ್ತಾನೆ, **"ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು; ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ"** (2 ಕೊರಿ. 2:11). ಇಂದು ಅನೇಕ ದೇವ ಮಕ್ಕಳು ಕೊಚ್ಚಿಕೊಳ್ಳುವುದನ್ನು ಕೇಳಿದ್ದೇನೆ. **'ನಾನು ದೇವರ ಮಗನು ಸೈತಾನನು ನನ್ನ ಹತ್ತಿರ ಸುಳಿಯೋದಿಲ್ಲ. ಅಷ್ಟು ಅವನಿಗೆ ತಾಕತ್ತು ಇಲ್ಲ'** ಎಂದು ಕೊಚ್ಚಿಕೊಂಡವರೇ ಎಚ್ಚರವಹಿಸದೆ ಆತನ ಬಲೆಯೊಳಗೆ ಬೀಳುವುದನ್ನು ನಾನು

ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ (ರೋಮ. 8:28).

ಕಣ್ಣಾರೆ ನೋಡಿದ್ದೇನೆ. ಮೋಸಪಡಿಸುವ ಸೈತಾನನು ಯೇಸುವನ್ನು ಕೂಡಾ ಬಿಡದೆ ವಂಚಿಸಲು ಪ್ರಯತ್ನಿಸಿದನು ಆದರೆ ಯೇಸು ಆತನಿಗೆ ಒಳಗಾಗದೆ ಎದುರಿಸುವುದನ್ನು ನಾವು ಕಾಣಬಹುದಾಗಿದೆ. ಆದಿಯಲ್ಲಿ ನಾವು ಏದೆನ್ ತೋಟದಲ್ಲಿ ಆದಾಮ ಹವ್ವಳು ಸೈತಾನನ ಕುಯುಕ್ತಿಗೆ ಒಳಗಾಗಿದ್ದನ್ನು ಕಾಣುತ್ತೇವೆ. ಪೌಲನು ಬರೆಯುತ್ತಾನೆ, ಸೈತಾನನಿಗೆ ಅವಕಾಶಕೊಡಬೇಡಿರಿ (ಎಫೆ. 4:27). ಪ್ರಿಯನೇ ನಿನ್ನ ಆತ್ಮೀಕ ಜೀವಿತವನ್ನು ಎಚ್ಚರಿಕೆಯಿಂದ ಕಾಪಾಡು. ಸತ್ಯವೇದ ಹೇಳುತ್ತದೆ, ನಂಬಿಕೆಯಲ್ಲಿ ದೃಢವಾಗಿದ್ದು ಆತನನ್ನು ಎದುರಿಸಿರಿ (1 ಪೇತ್ರ. 5:9). ಸೈತಾನನು ನಮ್ಮನ್ನು ಅಪನಂಬಿಕೆಗೆ ನಡೆಸಿ ಚಂಚಲತೆಗೆ ಒಳಪಡಿಸಿ ನಷ್ಟಪಡಿಸುತ್ತಾನೆ. ಪೌಲನು ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಈ ರೀತಿ ಬರೆದು ತನ್ನ ಭಯವನ್ನು ವ್ಯಕ್ತಪಡಿಸುತ್ತಾನೆ. **"ಹೇಗೆ ಹವ್ವಳು ಸರ್ಪದ (ಸೈತಾನನ) ಕುಯುಕ್ತಿಗೆ ಒಳಬಿದ್ದು ಮೋಸ ಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟು ಹೋದೀತೆಂದು ನನಗೆ ಭಯವುಂಟು"** (2 ಕೊರಿ. 11:3). ಯೌವನಸ್ಥರಲ್ಲಿ ಇಚ್ಛೆಗಳನ್ನು, ಆಸೆಗಳನ್ನು ತಂದು ಹಾಕಿ ವಂಚಿಸುವವನಾಗಿದ್ದಾನೆ. ಪ್ರಿಯ ಯೌವನಸ್ಥನೇ ಎಚ್ಚರವಾಗಿರು. ನಾವು ಲೋಕದಲ್ಲಿದ್ದರೂ ಲೋಕವು ನಮ್ಮೊಳಗೆ ಬರಬಾರದು. ಹಡಗು ನೀರಲ್ಲಿ ಚಲಿಸುತ್ತಿದ್ದರೂ ನೀರು ಹಡಗಿನೊಳಗೆ ಬಂದು ಬಿಟ್ಟರೆ ಹಡಗಿನ ಗತಿ ಏನು ಆಗಬಹುದು? ಊಹಿಸಿಕೊಳ್ಳೋಣ. ಪೇತ್ರನು ಬರೆಯುತ್ತಾನೆ, **"ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ"** (1 ಪೇತ್ರ. 1:13).

**2) ಶೋಧನೆಗೆ ಒಳಗಾಗದಂತೆ ಪ್ರಾರ್ಥನೆಯಲ್ಲಿ ಎಚ್ಚರಿಕೆ :–** (ಮತ್ತಾ. 26:41). ಶೋಧನೆ ಎಂದರೆ ಪರೀಕ್ಷೆಗೆ ಒಳಪಡುವುದಾಗಿದೆ. 2 ರೀತಿಯ ಶೋಧನೆಗಳಲ್ಲಿ ನಾವು ಹೋಗಬೇಕಾಗಿದೆ. ಮೊದಲನೆಯದಾಗಿ ಹೊರಗಿನಿಂದ ಬರುವ ಶೋಧನೆ, ಎರಡನೆಯದು ನಮ್ಮೊಳಗಿನಿಂದ ಬರುವ ಶೋಧನೆ. ಸಾಮಾನ್ಯವಾಗಿ ಬಹಳಷ್ಟು ಮಂದಿ ಮೊದಲನೆಯ ಶೋಧನೆಯನ್ನು ಜಯಿಸುತ್ತಾರೆ. ಹೊರಗಿನಿಂದ ಬರುವ ಅವಮಾನ, ನಿಂದನೆ, ವಿರೋಧ ಸಹಿಸಿಕೊಳ್ಳುತ್ತಾರೆ. ಆದರೆ ಬಹಳಷ್ಟು ಮಂದಿ ಒಳಗಿನಿಂದ ಬರುವ ಆಸೆ, ಇಚ್ಛೆ, ಮೋಹ, ಅಹಂ ಮುಂತಾದವುಗಳನ್ನು ಜಯಿಸಲಾರದೆ ಬಿದ್ದು ಹೋಗುತ್ತಾರೆ. ಪ್ರಿಯ ದೇವ ಮಗುವೆ, ನಿನ್ನ ಸ್ವಂತ ಬಲದಿಂದ ಈ ಶೋಧನೆಯನ್ನು ಜಯಿಸಲಾಗುವುದಿಲ್ಲ. ಕರ್ತನು ನಿನಗೆ ಸಹಾಯ ಮಾಡುವಾಗ ಸುಲಭವಾಗಿ ಆತನ ಸಹಾಯದಿಂದ ಜಯಿಸಬಲ್ಲೆ. ಬಹಳಷ್ಟು ಜನ ಶೋಧನೆ ಬಂದಾಗ ಎಲ್ಲಕ್ಕೂ ಸೈತಾನ, ಸೈತಾನ ಎಂದು ರೇಗುತ್ತಾ ಬಡಬಡಿಸುತ್ತಾ ಇರುವರು. ಇದರಲ್ಲಿ ಸೈತಾನದ್ದು ಮಾತ್ರವಲ್ಲ, ನಮ್ಮದ್ದು ಪಾಲಿರುತ್ತದೆ ಎಚ್ಚರಿಕೆ. ಪ್ರಿಯನೇ, ನಮಗೆ ಶೋಧನೆಗೆ ಪ್ರತಿಸಲವು ಒಳಪಡಿಸುವ ಕ್ಷೇತ್ರ ಯಾವುದು ಎಂಬುವುದನ್ನು ಗುರುತಿಸಿ ಅದರಿಂದ ದೂರವಾಗಿರುವುದಾದರೆ ಆ ಶೋಧನೆಯನ್ನು ಜಯಿಸಲು ಸಾಧ್ಯ.

ಮುಂದುವರಿಯುವದು.....

**ಪಾ॥ ರೊನಾಲ್ಡ್ ಮಚಾದೋ**

*ಬೇತೇಲ್ ಚರ್ಚ್ ಕಾಮಗೆರೆ.*

## ಕವನಗಳು

ನೀ ಕೊಟ್ಟೆ ನನಗೆ ಸುಜ್ಞಾನ
ಅದು ನಿನ್ನಯ ವರದಾನ
ಅದಕ್ಕಾಗಿ ಅರ್ಪಿಸುವೆ ನನ್ನ ತನುಮನ
ಸದಾ ಮಾಡುವೆ ನಾ ನಿನ್ನ ಧ್ಯಾನ

ಯೇಸು ನನ್ನ ಪ್ರಿಯತಮ
ಇನ್ನು ಬಯಸೆನು ಲೋಕದ ಸಂಗಮ
ಆತನ ಕೈಯಲ್ಲಿ ನಾವೊಂದು ಪುಟ್ಟ ಸುಮ
ಇನ್ನು ನನ್ನ ಮಾರ್ಗವೆಲ್ಲ ಸುಗಮ

ನೀ ನನಗೆ ಆಧಾರ
ನಿನ್ನ ಪ್ರೀತಿ ಅಮರ
ಅದು ನನ್ನ ಬಾಳಲ್ಲಿ ಮಧುರ

ನೀ ಪ್ರೀತಿಯ ಸಾಗರ
ಹುಡುಕಿದರು ಅದಕ್ಕೆ ಸಿಕ್ಕದು ತೀರ
ಆ ಸಾಗರಕ್ಕೆ ಯೇಸು ಆಧಾರ
ಆತನ ಪ್ರೀತಿ ಮಧುರ ಅಮರ

**– ಸುಮ ಎನ್.**

ಬೇತೇಲ್ ಚರ್ಚ್, ಕಾಮಗೆರೆ.

ಮನುಷ್ಯನ ಮನಸ್ಸಿನಲ್ಲಿ ಅನೇಕ ಸಂಕಲ್ಪಗಳಿವೆ; ಯೆಹೋವನ ಸಂಕಲ್ಪವೇ ಈಡೇರುವದು (ಜ್ಞಾನೋ. 19:21).

# ದೇವರ ಪ್ರೀತಿಯ ಆಳ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**"ನನ್ನ ಜನರು ತಮ್ಮ ದೋಷಫಲವನ್ನು ಅನುಭವಿಸಿ ನನ್ನ ಪ್ರಸನ್ನತೆಯನ್ನು ಬೇಡಿಕೊಳ್ಳುವ ತನಕ ನಾನು ನನ್ನ ವಾಸಸ್ಥಾನಕ್ಕೆ ಹಿಂದಿರುಗಿ ಹೋಗಿರುವೆನು; ಅವರು ಇಕ್ಕಟ್ಟಿಗೆ ಸಿಕ್ಕಿದ ಕೂಡಲೆ ನನ್ನನ್ನು ಆಶ್ರಯಿಸುವರು"** (ಹೋಶೆ. 5:15).

ಕರ್ತನಲ್ಲಿ ಪ್ರಿಯರೇ, ಹೋಶೆಯ ಪ್ರವಾದನ ಗ್ರಂಥವನ್ನು ಧ್ಯಾನಿಸುವಾಗ ದೇವಜನರು ಅಪನಂಬಿಗಸ್ತರಾದರೂ ದೇವರು ನಂಬಿಗಸ್ತನಾಗಿ ತನ್ನ ಜನರೊಂದಿಗೆ ನಿಂತಿರುವ ರೀತಿಯನ್ನು ಹೋಶೆಯನು ಶಕ್ತವಾಗಿ ತಿಳಿಸುವುದನ್ನು ಕಾಣಬಹುದು. ಹೋಶೆಯನು ಸ್ವಂತ ಜೀವಿತದ ಅನುಭವಗಳ ಮೂಲಕ ದೇವರ ಸಂದೇಶಗಳನ್ನು ಪ್ರಕಟಿಸಿದ ಪ್ರವಾದಿಯಾಗಿದ್ದನು. ಹೋಶೇಯ ಎಂಬ ಹೆಸರಿಗೆ ರಕ್ಷಣೆ, ವಿಮೋಚನೆ ಎಂಬ ಅರ್ಥಗಳಿವೆ.

ಕ್ರಿಪೂ. 790 ರಿಂದ 749ರವರೆಗೆ 2ನೇ ಯಾರೊಬ್ಬಾಮನು ಇಸ್ರಾಯೇಲ್ಯರನ್ನು ಆಳಿದ ಕಾಲ. ಅವರಿಗೆ ದೊಡ್ಡ ಸಮೃದ್ಧಿಯಿದ್ದ ಕಾಲವಾಗಿತ್ತು. ಈ ಸಮೃದ್ಧಿಯು ಜನರನ್ನು ಆತ್ಮೀಕವಾಗಿ ಎಡುವುದಕ್ಕೆ ಕಾರಣವಾಯಿತು. ಈತನ ನಂತರ ಬಂದ ಅನೇಕ ಅರಸರು ಇಸ್ರಾಯೇಲ್ಯರನ್ನು ಆಳಿದರೂ ಕೂಡಾ ಜೀವಸ್ವರೂಪನಾದ ದೇವರಿಂದ ದೂರ ಮಾಡಿ ಅನ್ಯಜನರ ವಿಗ್ರಹಾರಾಧನೆಗೆ ನಡೆಸಿದರು. ಈ ಕಾಲಘಟ್ಟದಲ್ಲಿ ಹೆಚ್ಚು ಕಡಿಮೆ 750 ರಿಂದ 736ರವರೆಗೆ ಇಸ್ರಾಯೇಲ್ಯರು ಆತ್ಮೀಕವಾಗಿ ಎಡವುದಕ್ಕಿರುವ ಕಾರಣ ತಿಳಿಸಿ ದೇವರ ಬಳಿಗೆ ತಿರುಗಿ ಬರುವುದಕ್ಕೆ ದೇವರು ಹೋಶೇಯನ ಮೂಲಕವಾಗಿ ಕರೆಕೊಡುವುದನ್ನು ಕಾಣಬಹುದು. ಹೋಶೇಯನ ಸೇವೆಯು ಉತ್ತರ ರಾಜ್ಯವಾದ ಇಸ್ರಾಯೇಲ್ ದೇಶದಲ್ಲಿ ಕೇಂದ್ರಿಕೃತವಾಗಿತ್ತು.

ಇಸ್ರಾಯೇಲ್ಯರನ್ನು ಹೋಶೇಯನ ಅಪನಂಬಿಗಸ್ತ ಹೆಂಡತಿಯಾದ ಗೋಮೆರಳಿಗೆ ಹೋಲಿಸಿ ಅವರ ಹಿಂಜರಿದ ಸ್ಥಿತಿಯ ಕಾಠಿಣ್ಯತೆಯನ್ನು ತಿಳಿಸುತ್ತಿದ್ದಾನೆ. ಜೀವಕ್ಕೆ ಸಮಾನವಾಗಿ ಪ್ರೀತಿಸಿದ ಸ್ವಂತ ಹೆಂಡತಿಯ ಅಪನಂಬಿಗಸ್ತಿಕೆಯ ನಿಮಿತ್ತ, ಮನೋವ್ಯಥೆಯನ್ನು ಅನುಭವಿಸಿದ ಹೋಶೇಯನು ಜನರ ಅಪನಂಬಿಗಸ್ತಿಕೆಯ ನಿಮಿತ್ತ ದೇವರ ಹೃದಯದ ವೇದನೆಯನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ. ದೇವರೊಂದಿಗಿರುವ ಇಸ್ರಾಯೇಲ್ಯರ ಪ್ರೀತಿ ವಾತ್ಸಲ್ಯವನ್ನು ಪ್ರವಾದಿಯು ತಿರುವಿಹಾಕದ ಚಪಾತಿಗೂ ಪ್ರಾತ:ಕಾಲದ ಮೋಡಕ್ಕೂ ಬೇಗನೆ ಮಾಯವಾಗುವ ಇಬ್ಬನಿಗೆ ಹೋಲಿಸಿದ್ದಾನೆ. ಇದರಿಂದ ಇಸ್ರಾಯೇಲ್ಯರು ದೇವರನ್ನು ಸೇವಿಸುವಾಗಲೇ ಪಾಪ ಮಾರ್ಗದಲ್ಲಿ ನಡೆಯುತ್ತಿದ್ದರು ಎಂದೂ ದೇವರೊಂದಿಗಿನ ಪ್ರೀತಿಯು ತಾತ್ಕಾಲಿಕವಾಗಿತ್ತು ಎಂದೂ ತಿಳಿದುಕೊಳ್ಳಬಹುದು (ಹೋಶೆ. 7:8, 6:4). ಯಾಕಂದರೆ ಇಸ್ರಾಯೇಲ್ಯರ ಪಾಪವು ದೇವರ ಮುಂದೆ ದೊಡ್ಡದಾಗಿತ್ತು.

1) ಯಾವಾಗಲೂ ದೇವರನ್ನು ಮರೆತು ಬಿಡುವ ಸ್ವಭಾವ ಇಸ್ರಾಯೇಲ್ಯರಿಗಿತ್ತು. ಜನರ ಇಕ್ಕಟ್ಟಿನ ಮಧ್ಯೆ ದೇವರು ಅವರನ್ನು ಆಶೀರ್ವದಿಸಿದನು. ಆದರೆ ಅವರು ಹೊಂದಿದ ಆಶೀರ್ವಾದಗಳಿಗೆ ಕೃತಜ್ಞತೆ ಯಿಲ್ಲದವರಾಗಿ ದೇವರನ್ನು ಮರೆತು ಬಿಟ್ಟರು (ಹೋಶೆ.13:6).

2) ಅವರು ಅನ್ಯ ದೇವತೆಗಳ ಹಿಂದೆ ಹೋಗಿ ದೇವರನ್ನು ನಿಂದಿಸಿದರೆಂದು ಪ್ರವಾದನೆಯ ಅನೇಕ ಭಾಗದಲ್ಲಿ ನೋಡಬಹುದು (ಹೋಶೆ. 2:8, 13–17; 4:12, 11:2).

3) ಜನರು ಪ್ರೀತಿ, ಸತ್ಯತೆ, ದೇವಜ್ಞಾನ ಇವುಗಳನ್ನು ಬಿಟ್ಟು ಸುಳ್ಳುಸಾಕ್ಷಿ, ನರಹತ್ಯ, ಕಳ್ಳತನ ಈ ಕೆಟ್ಟಕಾರ್ಯಗಳನ್ನು ಮಾಡಲು ಪ್ರಾರಂಭಿಸಿದರು (ಹೋಶೆ. 4:1–2).

4) ಜನರು ವಿಗ್ರಹಾರಾಧಕರಾದರು.

5) ಜನರು ದೇವರೊಂದಿಗೆ ಮೊಂಡುತನದಿಂದ ನಡೆದರು (ಹೋಶೆ. 4:16).

ಈ ಪಾಪ ಸ್ವಭಾವದ ನಿಮಿತ್ತವಾಗಿ ಇಸ್ರಾಯೇಲರು ದೇವರ ಕೋಪಕ್ಕೆ ಗುರಿಯಾಗಿ ಅವರ ಮೇಲೆ ನ್ಯಾಯತೀರ್ಪು ಪ್ರಕಟವಾಯಿತು (ಹೋಶೆ. 4:9, 7:2, 9:7–9, 12:2). ಆದರೆ ಕರುಣೆಯುಳ್ಳ ದೇವರು ತನ್ನ ಕೋಪದ ನಡುವೆಯೂ ಪಾಪದ ಮಾರ್ಗಬಿಟ್ಟು ಬರಲು ಹಲವು ಸಂದರ್ಭಗಳನ್ನು ಕೊಟ್ಟಿದ್ದನು (ಹೋಶೆ. 5:5, 10:12, 12:6) ಈ ಎಲ್ಲಾ ವಾಕ್ಯದಲ್ಲಿ ಕಾಣಬಹುದು.

ಇವತ್ತು ಪ್ರಿಯರೇ, ನೀವು ಯಥಾರ್ಥವಾಗಿ ಕರ್ತನಾದ ಯೇಸುವನ್ನು ಪ್ರೀತಿಸುತ್ತಿದ್ದೇನೋ? ಎಂಬುದಾಗಿ ಸ್ವಯಂ ಪರೀಕ್ಷಿಸಬೇಕಾಗಿದೆ ಅಥವಾ ಮೇಲ್ಕಂಡ ರೀತಿಯಲ್ಲಿ ಹೇಳಿದ ಹಾಗೆ ಇಸ್ರಾಯೇಲರಿಗೆ ದೇವರೊಂದಿಗಿರುವ ಪ್ರೀತಿ

ಯೆಹೋವನ ಭಯವು ಜೀವದಾಯಕವು; ಭಯಭಕ್ತಿಯುಳ್ಳವನು ತೃಪ್ತನಾಗಿ ನೆಲೆಗೊಳ್ಳುವನು ಅವನಿಗೆ ಕೇಡು ಸಂಭವಿಸದು (ಜ್ಞಾನೋ. 19:23).

ತಾತ್ಕಾಲಿಕವಾಗಿದ್ದ ಹಾಗೆ ಮನಬಂದಂತೆ ಜೀವಿಸುತ್ತಿದ್ದೇನೋ? ಲೋಕಕ್ಕಾಗಿಯೋ, ಸಂಪತ್ತಿಗಾಗಿಯೋ ದೇವರನ್ನು ಬಿಟ್ಟು ಇನ್ನಾವುದಕ್ಕೋ ನಿನ್ನ ಜೀವಿತವಲ್ಲ ಯೇಸುಗಾಗಿಯೇ ಆಗಿದೆ. ನಿನ್ನ ಜೀವಿತ ಯೇಸು ನಿಮ್ಮನ್ನು ಕ್ರಯಕ್ಕೆಕೊಂಡಿದ್ದಾನೆ. ನೀವು ಇನ್ನು ನಿಮ್ಮ ಸ್ವಂತ ಸೊತ್ತಲ್ಲ(1 ಕೊರಿ. 6:20).

ಹೋಶೆ. 3:1ರಲ್ಲಿ ಗೋಮೆರಳು ಅಪನಂಬಿಗಸ್ತಳಾಗಿ ಮಿಂಡರ ಹಿಂದೆ ಹೋದರೂ ಹೆಚ್ಚಿನ ಕ್ರಯವನ್ನುಕೊಟ್ಟು ಅವಳನ್ನು ಪ್ರೀತಿಸು ಎಂದು ಹೋಶೇಯನಿಗೆ ತಿಳಿಸಿದ ದೇವರು ಈ ಪುಸ್ತಕದ ಕೊನೆಯ ಅಧ್ಯಾಯಕ್ಕೆ ಬರುವಾಗ ದೇವರ ಪ್ರೀತಿಗೆ ಇಸ್ರಾಯೇಲ್ಯರನ್ನು ಕರೆಯುತ್ತಾ ನಿಬಂಧನೆಗಳಿಲ್ಲದೆ ತನ್ನ ಪ್ರೀತಿಯನ್ನು ಪ್ರಕಟಿಸುತ್ತಾ ಅನೇಕ ಆಶೀರ್ವಾದಗಳನ್ನು ವಾಗ್ದಾನ ಮಾಡುವುದನ್ನು ಕಾಣಬಹುದು.

ಪ್ರಿಯರೇ, ಮನ:ಪೂರ್ವಕವಾಗಿ ದೇವರ ಕಡೆಗೆ ಪಶ್ಚಾತ್ತಾಪದೊಂದಿಗೆ ಹಿಂದಿರುಗಿ ತಗ್ಗಿಸಿಕೊಂಡು ಬರುವುದಾದರೆ ಹೋಶೆ. 14:4–8ವಾಕ್ಯದ ಪ್ರಕಾರ ನಿಮ್ಮಲ್ಲಿ ದೇವರ ಆಶೀರ್ವಾದ ಪ್ರಕಟವಾಗುತ್ತದೆ ಮತ್ತು ಈ ಆಶೀರ್ವಾದವು ಎಲ್ಲಾ ಕಡೆಗೂ ಹರಡುತ್ತದೆ. ದೇವರು ನೀವು ಇರುವಂಥ ಪರಿಸ್ಥಿತಿಯಿಂದ ವಿಶಾಲತೆಗೆ ನಡೆಸುತ್ತಾನೆ. ನೀವು ಕಂಗೋಳಿಸುತ್ತೀರಿ. ದೇವರ ಮಹಿಮೆಯನ್ನು ನಿಮ್ಮಲ್ಲಿ ಅನೇಕರು ಕಾಣುತ್ತಾರೆ. ನೀವು ದೇಶದಾದ್ಯಂತ ಪರಿಮಳಿಸುತ್ತೀರಿ, ಈ ಸುವಾಸನೆ ಹಬ್ಬಿಕೊಳ್ಳುತ್ತದೆ. ನೀವು ದೇವರಿಗಾಗಿ ಫಲಿಸುತ್ತೀರಿ.

* ಹರಡಿಕೊಳ್ಳುವುದಕ್ಕೆ, ಬೆಳೆಯುವುದಕ್ಕೆ ಬೀಡುವುದಿಲ್ಲ ಎಂದು ವಾದಿಸಿ ಬೆಳೆದು ಹೆಮ್ಮರವಾಗಿ ಎತ್ತರವಾಗಿ ಬೆಳೆದು ನಿಂತ ಗೋಡೆಯ (ಶಕ್ತಿ) ಮುಂದೆ ಯೋಸೇಫನ ವೃಕ್ಷವು ಗೋಡೆಯ ಆಚೆಗೆ ಫಲವನ್ನು ಬಿಟ್ಟಿತು.
* ಮೋಶೆಯು ಓಡಿ ಬಂದ ಅದೇ ಸ್ಥಳದಲ್ಲಿ ದೇವರು ತನ್ನ ಅಧಿಕಾರದೊಂದಿಗೆ ಕಳುಹಿಸಿ ತನ್ನ ಜನರನ್ನು ಐಗುಪ್ತದಿಂದ ಬಿಡಿಸಿದನು.
* ನಿನವೆಗೆ ಹೋಗಬೇಕಾದವನು ತಾರ್ಷಿಷಿಗೆ ಓಡಿ ಹೋಗಿ ಅನೇಕ ಸಂಕಷ್ಟಕ್ಕೆ ಗುರಿಯಾಗಿ ಮೀನಿನ ಹೊಟ್ಟೆಯಲ್ಲಿ 3 ದಿನ ನಿನವೆ ಜನರಿಗಾಗಿ ಸಿದ್ಧಗೊಳಿಸಿ ಅವರನ್ನು ರಕ್ಷಿಸಿದನು.
* ಪೇತ್ರನು ಮುಳುಗಿದ ಸ್ಥಳದಲ್ಲೇ ಕರ್ತನು ಪೇತ್ರನನ್ನು ನಿಲ್ಲಿಸಿ ಆತನೊಂದಿಗೆ ನಡೆದನು.
* ತಪ್ಪಿಹೋದ ಮಗನು ತಂದೆ ಬಳಿಗೆ ಬಂದಾಗ ಹೊಸ ಆಶೀರ್ವಾದಗಳಿಂದ ತುಂಬಿಸಿದ ಪರಲೋಕದ ತಂದೆಯಾದ ದೇವರು ನಿನ್ನನ್ನು ಆಶೀರ್ವದಿಸಲು ಶಕ್ತನಾಗಿದ್ದಾನೆ.

ಇವತ್ತು ನೀವು ಎಲ್ಲಿ ಎಡವಿದಿರೋ ಅಲ್ಲಿಂದ ತಿರುಗಿಕೊಳ್ಳಿ, ಪುನರ್‌ಸ್ಥಾಪಿಸುವಂಥ ದೇವರು ನಿಮ್ಮನ್ನು ಪುನರ್‌ಸ್ಥಾಪಿಸುತ್ತಾನೆ.

ಹಳೇ ವೈಫಲ್ಯತೆ ಬಗ್ಗೆ ಮಾತಾಡಬೇಡಿರಿ. ದೇವರು ನಿಮ್ಮ ಜೀವಿತದಲ್ಲಿ ಮಾಡುವ ಹೊಸ ಕಾರ್ಯವನ್ನು ಎದುರುನೋಡಿರಿ.

ಕರ್ತನು ತಾನೇ ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.

## ಮತ್ತೆ ಬಾರದ ಹೊತ್ತು

ಸಮಯ ಅತ್ಯಂತ ಅಮೂಲ್ಯವಾದ ವಸ್ತು. ಕಳೆದುಹೋದ ಸಮಯವನ್ನು ಮರಳಿ ಗಳಿಸಲಾಗದು ಎಂಬುದು ಒಂದು ಸಾಮಾನ್ಯ ಉಕ್ತಿಯಾಗಿದೆ. ನೀವು ಸಮಯವನ್ನು ತಪ್ಪುವುದರಿಂದ ನಿಮ್ಮ ಸಮಯಕ್ಕೆ ಹೊಂದಿಕೊಂಡಿರುವ ಉಳಿದ ಮಂದಿಗೂ ತೊಂದರೆಯಾಗುತ್ತದೆ. ಸಮಸ್ಯೆಗಳು ಸರಣಿ ಪ್ರಕಾರವಾಗಿ ಮುಂದುವರಿಯುತ್ತವೆ. ನೀವೊಬ್ಬರು ಸಮಯವನ್ನು ಪಾಲಿಸುತ್ತಿದ್ದರೆ ಉಳಿದ ಅಷ್ಟೂ ಮಂದಿಗೂ ತೊಂದರೆ ತಪ್ಪುತ್ತಿತ್ತು.

ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದ ಹೆಚ್ಚಿನ ಪುರುಷರು ಸಮಯ ಪಾಲನೆಯಲ್ಲಿಯೂ ಶಿಸ್ತನ್ನು ಪಾಲಿಸದವರಾಗಿದ್ದಾರೆ. ಶಿವರಾಮ ಕಾರಂತರ ಉದಾಹರಣೆಯನ್ನೇ ಎತ್ತಿಕೊಳ್ಳಿ. ಯಾವುದೇ ಸಭೆ ಸಮಾರಂಭದಲ್ಲಿ ಒಂದೈದು ನಿಮಿಷ ತಡವಾಗಿ ಹೋದವರೂ ಅವರಲ್ಲ. ಯಾವುದೇ ಪತ್ರಗಳಿಗೆ ಒಂದು ದಿನ ತಡವಾಗಿ ಉತ್ತರ ಬರೆದವರಲ್ಲ.

ಆದರೆ, ಈಗಿನ ಕಾಲದಲ್ಲಿ ದೂರವಾಣಿ ಇದೆ, ಮೊಬೈಲ್ ಇದೆ, ಇಮೈಲ್ ಇದೆ, ಓಡಾಡುವುದಕ್ಕೆ ವಾಹನಗಳಿವೆ. ಆದರೆ ಎಲ್ಲವೂ ಇದ್ದು ನಾವು ಸಮಯ ಪಾಲನೆಯನ್ನು ಅಷ್ಟೊಂದು ಗಂಭೀರ ವಿಷಯವಾಗಿ ಪರಿಗಣಿಸುವುದಿಲ್ಲ. ಒಪ್ಪಿದ ಸಮಯಕ್ಕೆ ಕೆಲಸವನ್ನು ಪೂರೈಸಲು ತಡವಾದರೆ 'ಸ್ಸಾರಿ' ಎಂದು ಎರಡಕ್ಷರವನ್ನು ಉಲಿಯುವ ಸೌಜನ್ಯವನ್ನೂ ತೋರುವುದಿಲ್ಲ.

'ನಮ್ಮ ಸಮಸ್ಯೆಯಿರುವುದು ಸಂಪತ್ತಿನಲ್ಲಿ ಅಲ್ಲ. ಸಮಯದಲ್ಲಿ!' ಎಂದ ಜವಹರಲಾಲ್ ನೆಹರೂ ಅವರ ಮಾತು ಎಷ್ಟೊಂದು ಸತ್ಯ!

"ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆ. 5:16).

"ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ" (ಕೊಲೊ. 4:5).

– ಸಂಗ್ರಹ.

ನಿನ್ನ ಕಾರ್ಯಭಾರವನ್ನು ಯೆಹೋವನಿಗೆ ವಹಿಸಿದರೆ ನಿನ್ನ ಉದ್ದೇಶಗಳು ಸಫಲವಾಗುವವು (ಜ್ಞಾನೋ. 16:3).

# ಪ್ರಶ್ನೋತ್ತರಗಳ ಸ್ವರ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

1 ಸಮು. 10:9–10 ಸೌಲನು ಸಮುವೇಲನನ್ನು ಬಿಟ್ಟು ಹೊರಟ ಕೂಡಲೆ ದೇವರು ಅವನಿಗೆ ನೂತನ ಹೃದಯವನ್ನು ಕೊಟ್ಟನು. ಆ ದಿನದಲ್ಲಿ ಅ ಎಲ್ಲಾ ಗುರುತುಗಳು ಸಂಭವಿಸಿದವು. ಅವನು ದೇವಗಿರಿಗೆ ಬಂದ ಕೂಡಲೆ ದೇವರು ಅವನಿಗೆ ನೂತನ ಹೃದಯವನ್ನು ಕೊಟ್ಟನು. ಅದೇ ದಿನದಲ್ಲಿ ಆ ಎಲ್ಲಾ ಗುರುತುಗಳು ಸಂಭವಿಸಿದವು.

**"ತರುವಾಯ ಸಮುವೇಲನು ಜನರಿಗೆ ರಾಜನೀತಿಯನ್ನು ಬೋಧಿಸಿ ಅದನ್ನು ಒಂದು ಪುಸಕ್ತದಲ್ಲಿ ಬರೆದು ಯೆಹೋವನ ಸನ್ನಿಧಿಯಲ್ಲಿಟ್ಟನು; ಆ ಮೇಲೆ ಜನರನ್ನು ಅವರವರ ಮನೆಗಳಿಗೆ ಕಳುಹಿಸಿಬಿಟ್ಟನು. ಸೌಲನೂ ಗಿಬೆಯದಲ್ಲಿರುವ ತನ್ನ ಮನೆಗೆ ಹೋದನು; ಕೆಲವು ಮಂದಿ ಶೂರರು ದೇವರಿಂದ ಪ್ರೇರಿತರಾಗಿ ಅವನ ಜೊತೆಯಲ್ಲಿ ಹೋದರು. ಕೆಲವು ಮಂದಿ ಕಾಕಪೋಕರು ಇವನೋ ನಮ್ಮನ್ನು ರಕ್ಷಿಸುವವನು ಎಂದು ತಿರಸ್ಕರಿಸಿ ಕಾಣಿಕೆಗಳನ್ನು ತರಲಿಲ್ಲ. ಆದರೂ ಸೌಲನು ಸುಮ್ಮನಿದ್ದನು"** (1 ಸಮು. 10:25–27). ದೇವರು ಒಬ್ಬ ವ್ಯಕ್ತಿಗೆ ಒಂದು ಸೇವೆಗಾಗಿ ಅಭಿಷೇಕಿಸಿದ ಮೇಲೆ ಆ ಸೇವೆಯಲ್ಲಿ ನಿಶ್ಚಯವಾಗಿ ಎಷ್ಟೇ ತಡೆಗಳು ಬಂದರೂ ನಡೆಸುವನು. ಯಾವುದೇ ಕಾರಣಕ್ಕೊ ಒಬ್ಬ ವ್ಯಕ್ತಿ ಅಭಿಷೇಕ ಕಳಕೊಂಡರೆ ಅವನು ಸಾಧಾರಣ ಮನುಷ್ಯನ ಹಾಗೆಯೇ.

**5) ಪರಿಶುದ್ಧಾತ್ಮನ 3 ವಿಧವಾದ ಅನುಭವಗಳು :**

1. ಒಬ್ಬ ವ್ಯಕ್ತಿ ರಕ್ಷಣೆ ಹೊಂದುವಾಗ ಪರಿಶುದ್ಧಾತ್ಮನು ಅ ವ್ಯಕ್ತಿಯ ಒಳಗಡೆ ಬರುವಂತದ್ದು.
2. ಒಬ್ಬ ಕ್ರೈಸ್ತ ವಿಶ್ವಾಸಿಯ ಮೇಲೆ ಪರಿಶುದ್ಧಾತ್ಮನು ಬರುವಂತದ್ದು.
3. ಒಬ್ಬ ವಿಶ್ವಾಸಿ ತನ್ನ ಜೀವಮಾನದಲ್ಲಿ ಪವಿತ್ರಾತ್ಮಭರಿತನಾಗುತ್ತ ಇರುವಂತದ್ದು.

**1. ಒಬ್ಬ ವ್ಯಕ್ತಿ ರಕ್ಷಣೆಹೊಂದುವಾಗ ಪರಿಶುದ್ಧಾತ್ಮನು ಅವನ ಒಳಗಡೆ ವಾಸಮಾಡಲು ಹೋಗುವಂತದ್ದು:** ಹಳೆಯ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮನು ಅಭಿಷಕ್ತ ವ್ಯಕ್ತಿಗಳ ಮೇಲೆ ಬರುತ್ತಾ ಹೋಗುತ್ತಾ ಇದ್ದನು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಒಬ್ಬ ಅಭಿಷಕ್ತ ವ್ಯಕ್ತಿಯಲ್ಲಿ ಹೇಳಬೇಕಾದರೆ ಒಬ್ಬ ಅಭಿಷಕ್ತ ವ್ಯಕ್ತಿಯಲ್ಲಿ ಶಾಶ್ವತವಾಗಿ ಪರಿಶುದ್ಧಾತ್ಮನು ನೆಲೆಸಿರುತ್ತಾ ಇರಲಿಲ್ಲ. ಹೊಸ ಒಡಂಬಡಿಕೆಯಲ್ಲಿ ಕರ್ತನಾದ ಯೇಸುಕ್ರಿಸ್ತನು ಈ ರೀತಿ ಹೇಳಿದನು. **"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು"** (ಯೋಹಾ. 14:16). ಹೊಸ ಒಡಂಬಡಿಕೆಯಲ್ಲಿ ಪಂಚಶತ್ತಮದಿನದ ನಂತರ ಬಂದಿರುವ ಪರಿಶುದ್ಧಾತ್ಮನು ಒಬ್ಬ ಕ್ರೈಸ್ತ ವಿಶ್ವಾಸಿಯಲ್ಲಿ ಶಾಶ್ವತವಾಗಿ ವಾಸಮಾಡುವನು.

ಈ ಅನುಭವ ಒಬ್ಬ ವ್ಯಕ್ತಿಗೆ ಹೇಗೆ ಆಗುತ್ತದೆಂದರೆ ಒಬ್ಬ ವ್ಯಕ್ತಿಯು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಕರ್ತನಾದ ಯೇಸುಕ್ರಿಸ್ತನು ತನ್ನ ಪಾಪದ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡು ಕಲ್ವಾರಿ ಶಿಲುಬೆಯಲ್ಲಿ ಪ್ರಾಣಕೊಟ್ಟು ತನಗಾಗಿ ಹೂಣಲ್ಪಟ್ಟು ಮೂರನೆಯ ದಿನದಲ್ಲಿ ತನಗಾಗಿ ಮರಣದಿಂದ ಪುನರುತ್ಥಾನನಾಗಿ ಎದ್ದು ಬಂದನು ಎಂದು ನಂಬಿ ಬಾಯಲ್ಲಿ ಅರಿಕೆ ಮಾಡಿ ಕರ್ತನಾದ ಯೇಸುಕ್ರಿಸ್ತನನ್ನು ತನ್ನ ಜೀವಿತದ ಒಡೆಯನು ರಕ್ಷಕನು ಎಂದು ಅಂಗೀಕರಿಸಿಕೊಳ್ಳುತ್ತಾನೋ ಆಗ ಪರಿಶುದ್ಧಾತ್ಮನು ಆ ವ್ಯಕ್ತಿಯ ಒಳಗಡೆ ಶಾಶ್ವತವಾಗಿ ವಾಸಮಾಡಲು ಬರುತ್ತಾನೆ. ಇದು ಒಬ್ಬ ಕ್ರೈಸ್ತ ವಿಶ್ವಾಸಿಯಲ್ಲಿ ಪರಿಶುದ್ಧಾತ್ಮನ ಮುದ್ರೆ ಬೀಳುವ ಅನುಭವವಾಗಿದೆ.

**"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ"** (ಎಫೆ. 1:13).

**2) ಒಬ್ಬ ಕ್ರೈಸ್ತ ವಿಶ್ವಾಸಿಯ ಮೇಲೆ ಪರಿಶುದ್ಧಾತ್ಮನು ಬರುವಂತದ್ದು: "ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು"** (ಅ.ಕೃ. 1:8).

ಈ ಎರಡನೆಯ ಅನುಭವಕ್ಕೆ ಅನೇಕ ಹೆಸರುಗಳಿವೆ.

1. ಪವಿತ್ರಾತ್ಮನಸ್ನಾನ (ಮತ್ತಾ. 3:11, ಮಾರ್ಕ. 1:8, ಲೂಕ. 3:16).
2. ಬೆಂಕಿಯ ಸ್ನಾನ (ಮತ್ತಾ. 3:11, ಲೂಕ. 3:16).
3. ಪವಿತ್ರಾತ್ಮ ವರ (ಲೂಕ. 11:13).

ಸತ್ಯವಂತನ ರಾಜಮಾರ್ಗ ಹಾನಿಗೆ ದೂರ; ತನ್ನ ನಡತೆಯನ್ನು ಗಮನಿಸುವವನು ತನ್ನ ಆತ್ಮವನ್ನು ಕಾಯುವನು (ಜ್ಞಾನೋ. 16:17).

4. ತಂದೆಯ ವಾಗ್ದಾನ (ಲೂಕ. 24:49).
5. ಮೇಲಣ ಲೋಕದ ಶಕ್ತಿ (ಲೂಕ. 24:49).
6. ಪವಿತ್ರಾತ್ಮ ಮೇಲೆ ಬರುವುದು (ಅ.ಕೃ. 1:8).
7. ಪವಿತ್ರಾತ್ಮ ದಾನ (ಅ.ಕೃ. 2:38).
8. ಬಲದ ಅಭಿಷೇಕ (ಅ.ಕೃ. 10:38).
9. ಪವಿತ್ರಾತ್ಮನ ಅಭಿಷೇಕ (ಅ.ಕೃ. 10:38).

ಅಂದರೆ ಈ ಎರಡನೆ ಅನುಭವದಲ್ಲಿ ಒಬ್ಬ ಕ್ರೈಸ್ತ ವಿಶ್ವಾಸಿಯು ಪರಿಶುದ್ಧತ್ವದಲ್ಲಿ ಸಂಪೂರ್ಣವಾಗಿ ಮುಳುಗಿಸಲ್ಪಡುತ್ತಾನೆ. ಮೊದಲನೆಯ ಹಾಗೂ ಎರಡನೆಯ ಅನುಭವಗಳು ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವಿತದಲ್ಲಿ ಒಂದೇ ಸಲ ಆಗುತ್ತದೆ.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

**ಆರೋಗ್ಯ ಸ್ವರ**

# ಮಳೆಗಾಲದ ಮನೆಯೌಷಧಿ

* ವೀಳ್ಯದೆಲೆಯಲ್ಲಿ ಲವಂಗದ ಹುಡಿ, ಕಾಳುಮೆಣಸಿನ ಹುಡಿ, 4 ತುಳಸಿಯ ಎಲೆ ಇಟ್ಟು ಮಡಚಿ ಜಗಿದು ರಸ ಸೇವಿಸಿದರೆ ನೆಗಡಿ, ಗಂಟಲು ನೋವು, ಕೆಮ್ಮು ಶಮನವಾಗುತ್ತದೆ. ದಿನಕ್ಕೆ 4–5 ಸಾರಿ.
* ಮೆಣಸಿನಕಾಳನ್ನು ತುಪ್ಪದಲ್ಲಿ ಹುರಿದು ಹುಡಿಮಾಡಿ 4 ಚಿಟಿಕೆಯಷ್ಟು ತೆಗೆದುಕೊಂಡು ಅದಕ್ಕೆ 2 ಚಿಟಿಕೆಯಷ್ಟು ಗಂಧ ಮೆಣಸು (ಬಾಲ ಮೆಣಸು)ಹುಡಿಯನ್ನು ಬೆರೆಸಿ, 1 ಚಮಚ ಜೇನು ಬೆರೆಸಿ ಆಗಾಗ್ಗೆ ಸೇವಿಸುತ್ತಿದ್ದರೆ ನೆಗಡಿ, ಗಂಟಲು ನೋವು, ಕೆಮ್ಮು ಶಮನವಾಗುತ್ತದೆ.
* ನುಗ್ಗೆಯ ಸೊಪ್ಪಿನ ರಸ 6 ಚಮಚ , 2 ಚಿಟಿಕೆ ಕಾಳುಮೆಣಸಿನ ಹುಡಿ, 1 ಚಿಟಿಕೆ ಉಪ್ಪು, 2 ಚಮಚ ನಿಂಬೆರಸ ಬೆರೆಸಿ ಆಗಾಗ್ಗೆ ಸೇವಿಸಿದರೆ ಕೆಮ್ಮು, ದಮ್ಮು ಕಡಿಮೆಯಾಗುತ್ತದೆ.
* ಬೆಳ್ಳುಳ್ಳಿಯನ್ನು ತುಪ್ಪದಲ್ಲಿ ಹುರಿದು ಅದಕ್ಕೆ ಬೆಲ್ಲ ಸೇರಿಸಿ ನಿತ್ಯ 2–3 ಬಾರಿ ಸೇವಿಸಿದರೆ ದೀರ್ಘಕಾಲೀನ ಕೆಮ್ಮು ದಮ್ಮು ನಿಯಂತ್ರಣಕ್ಕೆ ಬರುತ್ತದೆ.
* ವೀಳ್ಯದೆಲೆಯನ್ನು ಬೆಂಕಿಯಲ್ಲಿ ಬಾಡಿಸಿ ರಸ ತೆಗೆದು ಅದಕ್ಕೆ ದೊಡ್ಡಪತ್ರೆ ರಸ, ತುಳಸಿರಸ, ಈರುಳ್ಳಿರಸ ಮತ್ತು ಜೇನುತುಪ್ಪ ಬೆರೆಸಿ ನೀಡಿದರೆ ಮಕ್ಕಳ ಕೆಮ್ಮು ದಮ್ಮುಕಡಿಮೆಯಾಗುತ್ತದೆ. ಕೂದಲು ಉದುರುವುದು, ಶುಷ್ಕವಾಗುವುದು.

ಮಳೆಯಲ್ಲಿ ನೆನೆದು, ಅಧಿಕ ತೇವಾಂಶ, ಧೂಳು ಇತ್ಯಾದಿಗಳಿಂದ ಮಳೆಗಾಲದಲ್ಲಿ ಕೂದಲು ಉದುರುವುದು, ಶುಷ್ಕವಾಗುವುದು ಹೆಚ್ಚು. ಇದರ ನಿವಾರಣೆಗೆ ಈ ಕೆಳಗಿನ ಮದ್ದುಗಳು ಹಿತಕಾರಿ.

* 100 ಗ್ರಾಂ ಕೊಬ್ಬರಿ ಎಣ್ಣೆಗೆ 1 ಚಮಚ ನಿಂಬೆರಸ ಬೆರೆಸಿ ಬಳಿಕ 1 ಚಮಚ ಸುಣ್ಣದ ತಿಳಿನೀರನ್ನು ಸೇರಿಸಿ ಕಲಸಬೇಕು. ಈ ಎಣ್ಣೆಯನ್ನು ನಿತ್ಯವೂ ಕೂದಲಿಗೆ ಹಚ್ಚಿದರೆ ಕೂದಲು ಉದುರುವುದು ನಿಲ್ಲುತ್ತದೆ ಮತ್ತು ಶುಷ್ಕ ಕೂದಲು ಹೊಳಪು ಪಡೆದುಕೊಳ್ಳುತ್ತದೆ.
* ದಂಟಿನ ಸೊಪ್ಪಿನ ರಸ ಕೂದಲಿಗೆ ಲೇಪಿಸಿ 20 ನಿಮಿಷದ ಬಳಿಕ ಸ್ನಾನವಾಡಿದರೆ ಕೂದಲು ಕಾಂತಿಯುತವಾಗಿ ಸೊಂಪಾಗಿ ಬೆಳೆಯುತ್ತದೆ.
* ಒಂದೆಲಗದ ರಸ, ಕಾಡಿಗ್ಗರುಗದ ರಸ, ನೆಲ್ಲಿಯ ರಸ (ಅಥವಾ ನೆಲ್ಲಿಪುಡಿ) ಕರಿಬೇವಿನ ಎಲೆಯ ರಸ ಇವೆಲ್ಲವನ್ನೂ ಸಮಪ್ರಮಾಣದಲ್ಲಿ ಎಳ್ಳೆಣ್ಣೆಗೆ ಬೆರೆಸಿ ಕುದಿಸಿ ಈ ತೈಲ ನಿತ್ಯ ಉಪಯೋಗಿಸಿದರೆ ಹಿತಕರ.

ಮಳೆಗಾಲದ ಮನೆಯೌಷಧಿ ಮಳೆಗಾಲ ಬಂದೊಡನೆ ಕಿರಿಯರು ಹಿರಿಯರು ಎನ್ನದೇ ಎಲ್ಲಾ ವರ್ಗದವರನ್ನೂ ನೆಗಡಿ, ಕೆಮ್ಮು, ಅಜೀರ್ಣ ಆಮ್ಲಪಿತ್ತ, ಚರ್ಮದ ತೊಂದರೆ, ಅತಿಸಾರ, ವಾಂತಿ, ಜ್ವರ ಮುಂತಾದವುಗಳು ಬಾಧಿಸುವುದು ಸರ್ವೇಸಾಮಾನ್ಯ.

ಹಲವಾರು ಸಣ್ಣಪುಟ್ಟ ಕಾಯಿಲೆಗಳನ್ನು ಅಥವಾ ರೋಗಲಕ್ಷಣಗಳನ್ನು ಸಮರ್ಪಕವಾಗಿ ಮೂಲಿಕೆಯ ಮದ್ದುಗಳಿಂದ ಮನೆಯಲ್ಲೇ ನಿಯಂತ್ರಿಸಬಹುದು. ಅಂತಹ 'ಅಜ್ಜಿಮದ್ದು' ಪರಂಪರಾಗತ ಪ್ರಾಮುಖ್ಯತೆ, ಮೌಲ್ಯ ಹೊಂದಿದೆ. ಮಳೆಗಾಲದಲ್ಲಿ ದೂಷಿತ ನೀರಿನಿಂದ ವಾಂತಿ, ಭೇದಿ ಉಂಟಾಗುತ್ತದೆ.

* ನೀರನ್ನು ಕುದಿಸಿ ತಣಿಸಿ, ಚಿಟಿಕೆ ಶುದ್ಧಪಚ್ಚಕರ್ಪೂರವನ್ನು ಬೆರೆಸಿ ಕುಡಿದರೆ ಮಳೆಗಾಲದಲ್ಲಿ ಹಿತಕರ. ಶುದ್ಧಜಲಮೂಲವನ್ನೇ ಉಪಯೋಗಿಸುವುದು ಅವಶ್ಯ.
* ಮಳೆಗಾಲದಲ್ಲಿ ಮಾವಿನ ಹಣ್ಣು, ಹಲಸು ಸೇವಿಸಿದರೆ ಮಕ್ಕಳಲ್ಲಿ ವಾಂತಿ, ಭೇದಿ ಸಾಮಾನ್ಯವಾಗಿ ಉಂಟಾಗುತ್ತದೆ. ಆದ್ದರಿಂದ ಮಳೆ ಬಂದ ನಂತರ ಮಾವು ಮತ್ತು ಹಲಸನ್ನು ಹಸಿಯಾಗಿ ತಿನ್ನಲು ನೀಡುವ ಬದಲು ಸಂಸ್ಕರಿಸಿ ಆಹಾರ ಖಾದ್ಯಗಳಾಗಿ ನೀಡಿದರೆ ಉತ್ತಮ.
* ಉದಾ: ಮಾವಿನ ಹಣ್ಣು ಬೇಯಿಸಿ ಪದಾರ್ಥ, ಹಲಸಿನ ಕಡಬು ಇತ್ಯಾದಿ.

ದೇವರ ವಾಕ್ಯವನ್ನು ಸ್ಮರಿಸುವವನು ಸುಕ್ಷೇಮವನ್ನು ಪಡೆಯುವನು; ಯೆಹೋವನಲ್ಲಿ ಭರವಸವಿಡುವವನು ಭಾಗ್ಯವಂತನು (ಜ್ಞಾನೋ. 16:20).

* ದಾಳಿಂಬೆಯ ದಿಂಡಿನ ಕಷಾಯಕ್ಕೆ ಮೆಂತ್ಯೆಯ ಕಷಾಯ ಬೆರೆಸಿ ಸ್ವಲ್ಪ ಜೇನು ಬೆರೆಸಿ ಕುಡಿದರೆ ಭೇದಿ ಶಮನವಾಗುತ್ತದೆ.
* ಮೊಸರಿನಲ್ಲಿ ಮೆಂತ್ಯೆ ಹುಡಿ ಬೆರೆಸಿ ನೀಡಿದರೆ ಆಮಶಂಕೆ ಶಮನವಾಗುತ್ತದೆ.
* ಮಾವಿನ ಚಿಗುರಿನ ಕಷಾಯ ಭೇದಿ ಮತ್ತು ವಾಂತಿಯಲ್ಲಿ ಪರಿಣಾಮಕಾರಿ.
* ಈರುಳ್ಳಿರಸ ಮತ್ತು ಜೇನು ಬೆರೆಸಿ ಆಗಾಗ್ಗೆ ಸೇವಿಸುತ್ತಿದ್ದರೆ ವಾಂತಿ ಶಮನವಾಗುತ್ತದೆ.
* ಎಳನೀರಿಗೆ ಸಕ್ಕರೆ,ಉಪ್ಪು, ಯಾಲಕ್ಕಿ ಹುಡಿ, ಕೊತ್ತಂಬರಿ ಹುಡಿ ಬೆರೆಸಿ ಆಗಾಗ್ಗೆ ಕುಡಿದರೆ ವಾಂತಿ ವಾಕರಿಕೆ ಶಮನವಾಗುತ್ತದೆ. ಸುಸ್ತೂ ನಿವಾರಣೆಯಾಗುತ್ತದೆ.

– ಸಂಗ್ರಹ.

---

# ಮನವಿ ಪತ್ರ

34 ವರ್ಷದ ಪಾ॥ ತೋಮಸ್ಸ್ ರಾಜು ಎಂಬುವವರು ಅನೇಕ ವರ್ಷಗಳಿಂದ ಸೇವೆಯಲ್ಲಿದ್ದು ಈಗ ಅಸ್ವಸ್ಥರಾಗಿದ್ದಾರೆ. ವೈದ್ಯರು ಅವರಿಗೆ ರಕ್ತ ಕ್ಯಾನ್ಸರ್ ಎಂದು ಪತ್ತೆ ಹಚ್ಚಿದ್ದಾರೆ. ಇವರ ವೈದ್ಯಕೀಯ ಶುಶ್ರೂಷೆಗಾಗಿ 6ರಿಂದ 7 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ.

ಇವರಿಗೆ ಸಹಾಯ ಹಸ್ತವನ್ನು ಚಾಚುವವರು ಯಾರಾದರೂ ಇರುವುದಾದರೆ ಅಥವಾ ದೇವರು ನಿಮಗೆ ಕೊಡಲು ಪ್ರೇರೇಪಿಸುವುದಾದರೆ ಈ ಕೆಳಕಂಡ ಖಾತೆಗೆ / ಹೆಸರಿನಲ್ಲಿ ಡಿ.ಡಿ ಅಥವಾ ಚೆಕ್ ಕಳುಹಿಸಬಹುದು.

ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

**Thangaraju / Thomas Raju**
**A/c No. 073200101010684 (IFSC Code. CORP0000732)**
**Corparation Bank Mangalore.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ
**ದೂರವಾಣಿ ಸಂಖ್ಯೆ : 09448164142, 09036223304.**
e-mail : paulmzedek@yahoo.com

# ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
**9902334941, 08202002781, 09964070654.**

ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷಮಾಡುತ್ತಿರುವೆನು
(ಕೀರ್ತ. 63:7).

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಕತ್ತಲಲ್ಲಿ ಅರ್ಧ ಭಾರತ 22 ರಾಜ್ಯಗಳು ತತ್ತರ: ರಾಜ್ಯಕ್ಕೂ ವಿದ್ಯುತ್ ಕೊರತೆ ಆತಂಕ ಉತ್ತರ ಭಾರತವನ್ನು ಕಾಡುತ್ತಿರುವ ವಿದ್ಯುತ್ ಸಮಸ್ಯೆ ಮುಂದುವರಿದ ಪರಿಣಾಮ 22 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ವಿದ್ಯುತ್ ಸಂಪರ್ಕವಿಲ್ಲದೆ ತತ್ತರಿಸಿಹೋದವು. ಪ್ರಮುಖ ಮೂರು ವಿದ್ಯುತ್ ಗ್ರಿಡ್‌ಗಳು ಕೈಕೊಟ್ಟ ಪರಿಣಾಮ ಭಾರತದ ಅರ್ಧಕ್ಕೂ ಹೆಚ್ಚು ಭಾಗದಲ್ಲಿ ಜನಜೀವನ ಅಸ್ತವ್ಯಸ್ಥಗೊಂಡಿತ್ತು. ಉತ್ತರದ ವಿದ್ಯುತ್ ಗ್ರಿಡ್ ವಿಫಲಗೊಂಡಿತ್ತು.
- ಈಜು : 15ರ ಹರೆಯದ ಮ್ಯುಲುಟೈಟ್‌ಗೆ ಚಿನ್ನ. ಲಿಥುವಾನಿಯಾದ ಹದಿಹರೆಯದ ಈಜುತಾರೆ ರುಟಾ ಮ್ಯುಲುಟೈಟ್ ಅವರು ಕೆಲವೊಂದು ಆತಂಕದ ಕ್ಷಣೆ ಎದುರಿಸಿದರೂ ವನಿತೆಯರ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಚಿನ್ನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.
- ಪುರುಷರ ಈಜು ಸ್ಪರ್ಧೆಯ 200 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದ ಫ್ರಾನ್ಸ್‌ನ ಯಾನಿಕ್ ಆಗ್ನೆಲ್ (ಮಧ್ಯ). ಜಂಟಿಯಾಗಿ ಬೆಳ್ಳಿಗೆದ್ದ ದಕ್ಷಿಣಕೊರಿಯದ ಪಾರ್ಕ್‌ತಾಯಿ–ವಾನ್, ಚೀನದ ಸನ್ ಯಾಂಗ್.
- ಅಸ್ಸಾಂ ಹಿಂಸೆಗೆ ಅಕ್ರಮವಲಸೆ ಕಾರಣ: ಅಡ್ವಾಣಿ ಅಸ್ಸಾಂನಲ್ಲಿನ ಜನಾಂಗೀಯ ಸಂಘರ್ಷಕ್ಕೆ ಬಾಂಗ್ಲಾದೇಶದಿಂದ ದೇಶಕ್ಕೆ ಅವ್ಯಾಹತವಾಗಿ ನಡೆಯುತ್ತಿರುವ ಅಕ್ರಮ ವಲಸೆಯೇ ನೇರ ಕಾರಣ ಎಂದು ಬಿಜೆಪಿಯ ವರಿಷ್ಠನಾಯಕ ಎಲ್.ಕೆ. ಅಡ್ವಾಣಿ ಆರೋಪಿಸಿದ್ದಾರೆ.
- ಪುಣೆ : ಸರಣಿ ಸ್ಫೋಟ ಪುಣೆಯ ಸದಾ ಜನದಟ್ಟಣೆಯ ಜಂಗ್ಲೀ ಮಹಾರಾಜ ರಸ್ತೆ ಪರಿಸರದ 4 ಕಡೆಗಳಲ್ಲಿ ಲಘು ತೀವ್ರತೆಯ ಸರಣಿ ಬಾಂಬ್ ಸ್ಫೋಟ ಸಂಭವಿಸಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಸ್ಫೋಟದ ಹಿನ್ನಲೆಯಲ್ಲಿ ದೇಶದ್ಯಂತ ಕಟ್ಟೆಚ್ಚರ ಘೋಷಿಸಲಾಗಿದ್ದು, ಮುಂಬಯಿ ನಗರದಲ್ಲಿ ಭದ್ರತೆ ಬಿಗಿಪಡಿಸಲಾಗಿದೆ.
- ಭಾರತ ಶ್ರೀಲಂಕಾ 4ನೇ ಪಂದ್ಯ ಭಾರತ ತನ್ನ ಏಕದಿನ ಇತಿಹಾಸದಲ್ಲಿ 400ನೇ ಜಯದಾಖಲಿಸಿತು.
- ತೀವ್ರ ಬರ ಪರಿಸ್ಥಿತಿ ಎದುರಿಸುತ್ತಿರುವ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ತತ್‌ಕ್ಷಣದ ನೆರವಿನ ಭರವಸೆ ದೊರಕಿಲ್ಲ. ಬರ ಕುರಿತು ಪರಿಷ್ಕೃತ ವರದಿಯನ್ನು ಒಂದು ವಾರದಲ್ಲಿ ಸಲ್ಲಿಸಿ, ಅದನ್ನು ಆಧರಿಸಿ ಪರಿಹಾರ ನೀಡುವ ಆಶ್ವಾಸನೆಯನ್ನು ಮಾತ್ರ ರಾಜ್ಯ ಸರ್ಕಾರಕ್ಕೆ ನೀಡಿದೆ.
- ಅಣ್ಣಾ ಟೀಂ ನಿರಶನ ಇಂದು ಸಂಜೆ ಅಂತ್ಯ: ಕಡೆಗೂ ಗಣ್ಯರ ಮನವಿಗೆ ಸ್ಪಂದಿಸಿರುವ ಅಣ್ಣಾ ತಂಡ ಭ್ರಷ್ಟಾಚಾರ ವಿರೋಧಿ ಅನಿರ್ದಿಷ್ಟಾವಧಿ ಉಪವಾಸವನ್ನು ಕೈಬಿಡಲು ನಿರ್ಧರಿಸಿದೆ. ಅಣ್ಣಾ ತಂಡ ಪ್ರಸ್ತುತ ರಾಜಕೀಯ ವ್ಯವಸ್ಥೆಗೆ ಪರ್ಯಾಯವನ್ನು ಒದಗಿಸುವ ಬಗ್ಗೆಯೂ ಯೋಚನೆ ಮಾಡುತ್ತಿದೆ.

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೈವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654, 9740985802**

ಭೂಮಿಯ ಕಟ್ಟಕಡೆಗಳಲ್ಲಿ ವಾಸಿಸುವವರೂ ನಿನ್ನ ಅದ್ಭುತಕೃತ್ಯಗಳಿಗಾಗಿ ಭಯಪಡುತ್ತಾರೆ
(ಕೀರ್ತ. 65:8).

# ಲಗಿನ್

**ಕಳೆದ ಸಂಚಿಕೆಯಿಂದ ಮುಂದುವರಿದಿದೆ**

ರೆಬೆಕಾ ಸರರಾಂ ಘರಾ ಬಾಗ್ಲಾಕ್ ಧಾಂವ್ಲೆಂ ಆನಿಂ ಎಲಿಯೆಜರಾ ವಿಶ್ಯಾಂತ್ ಆಪ್ಲ್ಯಾ ವ್ಹಡಿಲಾಂಕ್ ತಿಳ್ಸುನ್ ಆಪ್ಣಾಂಕ್ ತಾಣೆಂ ದಿಲ್ಲಿಂ ಇನಾಮಾಂ ದಾಕಂವ್ಕ್‍ಲಾಗ್ಲೆಂ. ಹೆಂ ಪಳೆವ್ನ್ ರೆಬೆಕಾಚೊ ಭಾವ್ "ಲಾಬಾನ್" ಘರಾ ಭಾಯ್ರ್ ಧಾಂವೊನ್ ಆಯ್ಲೊ ಆನಿಂ ಕರ್‍ಯಾಂ ಸಾಂಗಾತಾ ರಾವೊನ್ ಉಬೊ ಆಸ್ಚ್ಯಾ ಎಲಿಯೆಜರಾಕ್ ಚೊಯ್ಲೆಂ ಆನಿಂ ತಾಕಾ ಮ್ಹಣಾಲೊ "ಹೆ ಪುನೆಕೆಲ್ಲ್ಯಾ ಭಾಯ್ರ್ ಕಿತ್ಯಾಕ್ ಉಬೊ ಆಸಾಯ್? ಘರಾ ಭಿತೆರ್ ಚಲ್, ತುಕಾ ಆನಿಂ ತುಜ್ಯಾ ಕರ್‍ಯಾಂಕ್ ಧಾರಾಳ್ ಸುವಾತ್ ಆಸಾ".

ಹೆಂ ಆಯ್ಕೊನ್ ಎಲಿಯೆಜರ್ ಭಿತೆರ್ ಸರ್ತಚ್ಚ್ ಲಾಬಾನ್ ಉದ್ಕಾಚೊ ತಾಂಬ್ಯೊ ದೀವ್ನ್ ಜೆವ್ಣಾಚಿ ಸರ್ಭರಾಯ್ ಕರುಂಕ್ ಲಾಗ್ಲೊ.

ತವಳ್ ಎಲಿಯೆಜರಾನ್ ಮ್ಹಳೆಂ "ಮ್ಹಾಕಾ ಹಾಂವ್ ಹಂಗಾಸರ್ ಕಿತ್ಯಾಕ್ ಆಯ್ಲಾಂ ತೆಂ ಪಯ್ಲೆಂ ಸಾಂಗೊಂಕ್ ಸೊಡಾ" ತಾಣೆಂ ವಿನತಿ ಕೆಲಿ "ಹಾಂವ್ ಆಬ್ರಾಹಾಮಾಚೊ ಚಾಕರ್, ಸರ್ವೆಸ್ಪರ್ ದೇವಾನ್ ಮ್ಹಜ್ಯಾ ಧನ್ಯಾಕ್ ವಿಶೇಶ್ ಆಶಿರ್ವಾದಾನಿಂ ಭರ್ಲಾಂ. ಗೊರ್ವಾಂ, ಬಕ್ರೆ, ಕರಿಂ, ಗಾಡ್ವಾಂ, ರುಪೆಂ, ಭಾಂಗಾರ್ ಆನಿಂ ಚಾಕ್ರಾಂ ಧಾರಾಳ್ ಮಾಪಾನ್ ದೀವ್ನ್ ಧನಾದಿಕ್ ಕೆಲಾ. ಆನಿಂ ತಾಣೆಂ ಮ್ಹಾಕಾ ತಾಚ್ಯಾ ದಾಯ್ಜ್ಯಾಂ ಭಿತರ್ಲೆಂ ಚೆಡುಂ ಆಪ್ಲ್ಯಾ ಪುತಾಕ್ ಇಜಾಕಾಕ್ ಹಾಡುಂಕ್ ಹಂಗಾಸರ್ ಧಾಡ್ಲಾ. ಆನಿಂ ಹ್ಯಾ ಖಾತಿರ್ ಹಾಂವೆಂ ಸರ್ವೆಸ್ಪರ್ ದೇವಾಕಡೆಂ ಮಾಗ್ಲೆಂ ಆನಿಂ ಸರ್ವೆಸ್ಪರ್ ದೇವಾನ್ ಇಜಾಕಾ ಖಾತಿರ್ ಸಾರ್ಕಿ ವಿಂಚವ್ಣ್ ದಾಕಯ್ಲಿ." ಆಶೆಂ ಘಡಲ್ಲೆಂ ಸರ್ವ್ ಎಲಿಯೆಜರಾನ್ ರೆಬೆಕಾಚ್ಯಾ ವ್ಹಡಿಲಾಂಕ್ ಸಾಂಗ್ಲೆಂ. ಹೆಂ ಆಯ್ಕೊನ್ ಸರ್ವೆಸ್ಪರ್ ದೇವಾಚಿ ಖುಶಿ ಕಶಿ ಆಸಾ ತಶಿ ಜಾಂವ್!" ತೆ ಉದ್ಗಾರ್ಲೆ.

ಎಲಿಯೆಜರಾನ್ ಧನಿಯಾನ್ ಧಾಡಲ್ಲಿಂ ವಸ್ತು ಇನಾಮಾಂ ರೆಬೆಕಾಕ್ ಆನಿಂ ತಿಚ್ಯಾ ಕುಟ್ಮಾ ಭಾಂವ್ಡಾಂಕ್ ದಿಲಿಂ. ತಿ ರಾತ್ ತಾಣಿಂ ದಬಾಜೀಕ್ ರಿತಿನ್ ಆಚಾರ್ಸಿಲಿ. ತಸೆಂಚ್ಚ್ ದುಸ್ರೆ ದಿಸಾ ವ್ಹಡಿಲಾನಿಂ ರೆಬೆಕಾಚಿ ಒಪ್ಪಿಗಿ ಜಾತಚ್ "ಆವಯ್ ಜಾಹಜಾರ್ ಭುರ್ಗ್ಯಾಂ ನಾತ್ರಾಚಿಂ ಜಿಂ ಮೊಡುಂ ತಾಕತ್ ದುಸ್ಮಾನಾಚಿಂ" ಮ್ಹಳ್ಳ್ಯಾ ಆಶಿರ್ವಾದಾ ಸಂಗಿಂ ಎಕಾ ಸಾಂಜೆಚ್ಯಾ ವೆಳಾರ್ ಇಜಾಕ್ ಆಪ್ಲ್ಯಾ ಶೆತಾಂತ್ ಪಾಸಾಂಯೊ ಮಾರ್ತಾನಾ ಎಲಿಯೆಜರಾಚ್ಯಾ ಕರ್‍ಯಾಂ ಸಂಗಿಂ ಯೆಂವ್ಚ್ಯಾ ತ್ಯಾ ಚಲಿಯೆಕ್ ತಾಣೆಂ ಪಳಯ್ಲೆಂ ತಸೆಂಚ್ಚ್ ರೆಬೆಕಾಚಿ ನದರ್‌ಯ್ ಇಜಾಕಾ ವಯ್ರ್ ಪಡ್ಲಿ. ಉಪ್ರಾಂತ್ ಎಲಿಯೆಜರಾನ್ ತಾಂಕಾಂ ಎಕಾಮೆಕಾ ಒಳಕ್ ಕರುನ್ ಹಕೀಗತ್ ವಿವರ್ಸಿಲಿ. ತಶಿಂ ತಿಂ ಮೊಗಾರ್ ಪಡ್ಲಿಂ, ಇಜಾಕಾನ್ ಆಪ್ಲ್ಯಾ ಆವಯ್ಚ್ಯಾ ತಂಬಾಂತ್ ರೆಬೆಕಾ ಸಂಗಿಂ ಲಗಿನ್ ಕರುನ್ ಆಪ್ಲಿ ಪತಿಣ್ ಕರುನ್ ಘೆತ್ಲಿ.

ಆಪ್ಲಿ ಆವಯ್ ಸಾರಾ ಸರಲ್ಲ್ಯಾ ಉಪ್ರಾಂತ್ ಎಕ್ಸುರೊ ಜಾಲ್ಲೊ ಇಜಾಕ್ ರೆಬೆಕಾಚ್ಯಾ ಸಾಂಗಾತಾಂತ್ ಭುಜ್ವಣ್ ಜೊಡುಂಕ್ ಪಾವ್ಲೊ.

**ಹಕ್ಕಾಚೊ ವಿಕ್ರೊ.** ಅಬ್ರಾಹಾಮ್ ಬೋವ್ ಜಾಂಟೊ ಜಾವ್ನ್ ಮರಣ್ ಪಾವ್ಲೊ ತಾಚ್ಯಾ ಪೂತಾನಿಂ ಇಜಾಕಾನ್ ಆನಿಂ ಇಶ್ಮಾಯೇಲಾನ್ ತಾಕಾ ಮಾತ್ಯೆಕ್ ಪಾಯ್ಲೆಂ.

ಆಬ್ರಾಹಾಮಾ ಬರಿಂಚ್ಚ್ ಇಜಾಕ್‌ಯ್ ಕಾನಾನ್ ಗಾಂವಾಂತ್ ವಸ್ತಿ ಕರ್ನ್ ಆಸಲ್ಲೊ. ಜಾಯ್ತೊ ತೇಂಪ್ ಪರ್ಯಾಂತ್ ರೆಬೆಕಾಕ್ ಭುರ್ಗಿಂ ಜಾಂವ್ಕ್ ನಾತಲ್ಲ್ಯಾನ್ ತಾಣೆಂ ಆಪ್ಲ್ಯಾ ಬಾಯ್ಲೆ ಬಾಬ್ತಿನ್ ಸರ್ವೆಸ್ಪರ್ ದೇವಾಕಡೆಂ ಮಾಗ್ಣೆಂ ಕೆಲೆಂ. ಅಶೆಂ ಸರ್ವೆಸ್ಪರ್ ದೇವಾನ್ ತಾಚೆಂ ಮಾಗ್ಣೆಂ ಆಯ್ಕಾಲೆಂ ರೆಬೆಕಾಕ್ ಜವ್ಳೆ ಚೆರ್ಕೆ ಭುರ್ಗೆ ಜಲ್ಮಾಲೆ. ಪಯ್ಲೆಂ ಭುಂಯ್ ಪಡಲ್ಲ್ಯಾ ಭುರ್ಗ್ಯಾಕ್ "ಎಸಾವ್" ಮ್ಹಣ್ ದುಸ್ರ್ಯಾಕ್ "ಜಾಕೊಬ್" ಮ್ಹಣ್ ನಾಂವಾಂ ದವರ್ಲಿಂ.

ತ್ಯಾ ಕಾಳುರ್ ಬಾಪಯ್ಚ್ಯಾ ನಂತರ್ "ಮ್ಹಾಲ್ಘಡ್ಯಾಚ್ಯಾಂ ಆಸ್ತಿಂತ್ಲೊ ದೊಡೊ ಭಾಗ್" ವ್ಹಡ್ಲ್ಯಾ ಪುತಾಕ್ ಮೆಳ್ತಾಲೊ. ತಶೆಂ ಹೆಂ "ಮ್ಹಾಲ್ಘಡ್ಯಾಚೆಂ ಹಕ್ಕ್" ಎಸಾವ್ ಮ್ಹಾಲ್ಘಡೊ ಜಾಲ್ಲ್ಯಾನ್ ತಾಕಾ ಸೆರ್ವಾಲ್ಲೆಂ.

ಇಜಾಕಾಚೆ ದೊಗೀ ಭುರ್ಗೆ ವಾಡೊನ್ ವ್ಹಡ್ ಜಾಲೆ ಎಸಾವ್ ಸಾಮರ್ತ್ವಂತ್ ಶಿಕಾರಿ ಜಾಲೊ ಪುಣ್ ಜಾಕೊಬ್ ಸಾಧೊಬೊಳೊ ಜಾವ್ನ್ ತಂಬಾಂತಚ್ಚ್ ಜಿಯೆತಾಲೊ. ಎಸಾವ್ ಬಾಪಯ್ಕ್ ಶಿಕಾರೆಚೆಂ ಮಾಸ್ ಖಾವಯ್ತಲೊ ಜಾಲ್ಲ್ಯಾನ್ ಇಜಾಕಾಕ್ ಮೊಗಾಚೊ ಜಾಲೊ. ಪುಣ್ ಆವಯ್ ರೆಬೆಕಾ ಸಾಧೊ ಆನಿಂ ಬುದ್ವಂತ್ ಧಾಕ್ಟ್ಯಾ ಪುತಾ ಜಾಕೊಬಾಚಿ ಮೋಗ್ ಕರ್ತಾಲಿ.

ಎಕ್ ದಿಸ್ ಎಸಾವ್ ಭುಕೆಚ್ಯೊ ಒಡಿ ಕಾಡಿತ್ತ್ ಘರಾ ಪಾವಲ್ಲೊ, ತೆಣೆಂ ಭಾವ್ ಜಾಕೊಬ್ ತಾಂಬ್ಡ್ಯಾ ರಾಂದ್ವಯೆಚೆಂ ಕಾಲ್ದ್ ಕರ್ನ್ ಆಸಲ್ಲೊ ತಾಣೆಂ ದೆಖ್ಲೆಂ ಆನಿಂ ಜಾಕೊಬಾ ಕಡೆಂ ಮ್ಹಾಕಾ ಭುಕೆಚೊ ಒಡಿ ಸೊಸುಂಕ್ ಜಾಯ್ನಾಂತ್ ಮ್ಹಾಕಾ ಜೆಂವ್ಕ್ ದಿ ಮ್ಹಣಾಲಾಗ್ಲೊ. ತವಳ್ ಜಾಕೊಬ್ ಹಾಂವ್ ತುಕಾ ಜೆಂವ್ಕ್ ದಿತಾಂ ತುಜೆಂ ತೆಂ "ಮ್ಹಾಲ್ಘಡ್ಯಾಚೆಂ ಹಕ್ಕ್" ಮ್ಹಾಕಾ ವಿಕಿಜಾಯ್ ಮ್ಹಳ್ಳೆಂ ಶರ್ತ್ ಘಾಲಿಲಾಗ್ಲೊ. "ಹಾಂವ್ ಭುಕೇನ್ ಜೀವ್ ತುಟ್ಚೆ ಗತಿಕ್ ಪಾವ್ಲಾಂ "ಮ್ಹಾಲ್ಘಡ್ಯಾಚೆಂ ಹಕ್ಕ್" ಘೇವ್ನ್ ಕಿತೆಂ ಕರುಂ?" ಮ್ಹಳ್ಳ್ಯಾ ಉತ್ರಾಂ ಬರಾಬರ್ ಹಕ್ಕ್ ವಿಕೊಂಕ್ ಒಪ್ವಾಲೊ. ಜಾಕೊಬಾನ್ ಭಾಕ್ರಿ ಆನಿಂ

ನೀತಿ ಕೃಪೆಗಳನ್ನು ಹುಡುಕುವವನು ನೀತಿ ಜೀವಕೀರ್ತಿಗಳನ್ನು ಪಡೆಯುವನು
(ಜ್ಞಾನೋ. 21:21).

ರಾಂದ್ವಯ್ ವಾಡ್ಲಿ. ಅಶೆಂ ಮತ್ಲಬಿಪಣಾನ್ ಜಾಕೊಬಾನ್ "ವ್ಹಾಲ್ಫಡ್ಯಾಚೆಂ ಹಕ್ಕ್" ಆಪ್ಲಾಯ್ಲೆಂ ಆನಿಂ ಎಸಾವಾನ್ ಬೇಪರ್ವಾನ್ ಆಪ್ಲೆಂ ಹಕ್ಕ್ ಜಾಕೊಬಾಕ್ ಸೋಡ್ನ್ ದಿಲೆಂ.

**ಬೆಸಾಂವಾಚಿ ಲೂಟ್.**

ಇಜಾಕ್ ಮ್ಹಾತಾರೊ ಜಾವ್ನ್ ಆಯ್ಲೊ, ತಾಚಿ ದೀಷ್ಟ್ಯ್ ಘಯ್ರಿ–ಘಯ್ರಿ ಜಾಲಿ. ತೆದ್ನಾ ತಾಣೆಂ ತಾಚ್ಯಾ ವ್ಹಡ್ಲ್ಯಾ ಪೂತಾಕ್ ಎಸಾವಾಕ್ ಆಪವ್ನ್ "ಹಾಂವೆಂ ಮರ್ಚ್ಯಾ ಪಯ್ಲೆಂ ತುಕಾ ಆಶೀರ್ವಾದಿತ್ ಕರುಂಕ್ ಆಸಾ, ತುಂ ಮಾಕಾ ಶಿಕಾರೆಚೆಂ ಮಾಸ್ ರುಚೀಕ್ ರಿತಿನ್ ರಾಂದುನ್ ವಾಡ್ ಉಪ್ರಾಂತ್ ಹಾಂವ್ ತುಕಾ ಬೆಸಾಂವ್ ದಿತಲೊಂ" ಮ್ಹಣಾಲಾಗ್ಲೊ. ಹೆಂ ಆಯ್ಕಾಲ್ಲೆಂ ರೆಬೆಕಾ ಆಪ್ಲ್ಯಾ ಧಾಕ್ಟ್ಯಾ ಪೂತಾ ಜಾಕೊಬಾಕ್ ಆಪವ್ನ್ "ಅಳೆ ಪುತಾ ತುಜೊ ಬಾಪಯ್ ಮರ್ಚ್ಯಾ ಪಯ್ಲೆಂ ಸರ್ವೆಸ್ಪರ್ ದೇವಾ ಮುಕಾರ್ ಎಸಾವಾಕ್ ಬೆಸಾಂವಾಂ ದಿತಾ ಖಂಯ್ ! ತುಂ ಒಸುನ್ ಹಿಂಡಾಂತ್ಲಿಂ ದೋನ್ ಬಕ್ಡೆಪಿಲಾಂ ಹಾಡ್ ತುಜೆ ಬಾಪಯ್ಚೆ ರುಚೆ ತೆಕಿತ್ ಹಾಂವ್ ರಾಂದ್ತಾಂ ತುಂ ವ್ಹರ್ನ್ ಬಾಪಯ್ಕ್ ದಿ ತೊ ತೆಂ ಖಾವ್ನ್ ತುಕಾ ಬೆಸಾಂವಾಂ ದಿತಲೊ." ಮ್ಹಣ್ ಸಾಂಗಾಲಾಗ್ಲಿ.

ಉಪ್ರಾಂತ್ ಖಂಯ್‌ಪುಣಿ ವೇಂಗ್ ಮಾರಿತ್ ಮ್ಹಳ್ಯಾ ಭಿಂಯಾನ್ ಎಸಾವಾಚ್ಯಾ ಆಂಗಾ ಬರಿಂ ಲೊಂವೆರೊ ಕರುಂಕ್ ಬಕ್ಡ್ಯಾಚ್ಯಾ ಜಾಮ್ಡ್ಯಾ ನ್ಹೆಸವ್ನ್ ಎಸಾವಾಚಿ ಮುಸ್ತಾಯ್ಕಿ ಘಾಲುನ್ ಹಾತಾಂತ್ ಮಾಸ್ ರಾಂದುನ್ ದೀವ್ನ್ ರೆಬೆಕಾನ್ ಜಾಕೊಬಾಕ್ ಇಜಾಕಾ ಸರ್ಶಿಂ ಧಾಡ್ಲೊ. ಇಜಾಕಾನ್, ಜಾಕೊಬಾಕ್ ಎಸಾವ್ ಮ್ಹಣ್ ಚಿಂತುನ್, ಮಾಸ್ ಖಾವ್ನ್, ದಾಕಾಂ ರೋಸ್ ಪಿಯೆವ್ನ್ ಜಾಕೊಬಾಕ್ ಸರ್ವೆಸ್ಪರ್ ದೇವಾ ಮುಕಾರ್ ಬೆಸಾಂವಾಂ ದೀವ್ನ್ ಆಶಿರ್ವಾರ್ದೀತ್‌ಕ ಕೆಲೊ! ಆಶೆಂ ಘುಟ್ಮಳಾನ್ ಮ್ಹಳ್ಳೆಬರಿಂ ಜಾಕೊಬಾನ್ ಎಸಾವಾಚೆಂ ಹಕ್ಕ್ ಲೂಟ್ಲೆಂ.

**ಮುಂದುವರಿಯುವದು.......**

**ಬರಯ್ಲಾರ್: ಜೆ ಜುದಾಸ್**

(ಡೇವಿಡ್ ಲುವಿಸ್ ತಲ್ಲುರ್).

---

## ಪ್ರಾರ್ಥನಾ ಮನವಿಗಳು

- **ನಮ್ಮ ದೇಶದಲ್ಲಿ, ರಾಜ್ಯದ ಅನೇಕ ಕಡೆಗಳಲ್ಲಿ ಜನರು ಆಹಾರವಿಲ್ಲದೆ, ನೀರಿಲ್ಲದೆ, ಕತ್ತಲೆಯಲ್ಲಿ ಜೀವಿಸುತ್ತಿರುವ ಜನರಿಗೆ ದೇವರು ಬಿಡುಗಡೆಯನ್ನು ಕೊಟ್ಟು ಆಶೀರ್ವದಿಸುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ಸೇವೆ ಮಾಡುತ್ತಿರುವ ಪ್ರತಿಯೊಂದು ಸೇವಕರುಗಳಿಗೆ ಕರ್ತನು ಆರೋಗ್ಯವನ್ನು, ದೈವ ಕಾವಲನ್ನು ಕೊಟ್ಟು ರಕ್ಷಿಸುವಂತೆ ಪ್ರಾರ್ಥಿಸಿರಿ.**
- **ಕರ್ನಾಟಕದಲ್ಲಿನ ರಾಜಕೀಯ ಗೊಂದಲಗಳು ನಿವಾರಣೆಯಾಗಿ, ಕರ್ತನಿಂದ ನಡೆಸಲ್ಪಡುವ ಒಂದು ಉತ್ತಮ ಆಳ್ವಿಕೆ ನೆಲೆಸುವಂತೆ ಪ್ರಾರ್ಥಿಸಿರಿ.**
- **ದೇವರ ಸ್ವರ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಿರಿ.**

---

## ಡಿಜಿಎಮ್ ಬೇತೇಲ್ ಅಂಕಣ

- **ಮಾನಸಿಕ ಅಸ್ವಸ್ಥರಾಗಿ ರಸ್ತೆಯಲ್ಲಿ ಅಲೆದಾಡುತ್ತಿದ್ದ ಪೊನ್ನರಸು, ಪೊಳನಿಸ್ವಾಮಿ, ಪ್ರಭಾಕರ್ ರೆಡ್ಡಿ ಹಾಗೂ ಲಾಲ್ ರಾಜ್, ಇವರು ವಿಶ್ವಾಸದ ಮನೆ ಅನಾಥಶ್ರಮದಲ್ಲಿ ವೈದ್ಯಕೀಯ ಚಿಕಿತ್ಸೆ ಹಾಗೂ ಆರೈಕೆಯನ್ನು ಹೊಂದಿ ಗುಣಮುಖರಾಗಿ ತಮ್ಮ ಕುಟುಂಬಕ್ಕೆ ತೆರಳಿದ್ದಾರೆ.**
- **65ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಶ್ವಾಸದ ಮನೆ ಅನಾಥಾಶ್ರಮದಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು.**
- **ಕರ್ತನ ಕೃಪೆಯಿಂದ ಆಗಸ್ಟ್ 15, 16ರಂದು ಡಿಜಿಎಮ್ ಬೇತೇಲ್ ಶಂಕರಪುರ ಸಭೆಯಲ್ಲಿ 2 ದಿವಸದ ವಿಶೇಷ ಕೂಟಗಳನ್ನು ನಡೆಸಲಾಯಿತು. ಪಾ|| ಶಿಜು (ಕೊಟ್ಟಾಯಂ)ರವರು ದೇವಸಂದೇಶ ನೀಡಿದರು ಹಾಗೂ ಪಾ|| ಪಿ.ಡಿ.ಬಾಬು(ಮಳವಳ್ಳಿ)ರವರು ಭಾಷಾಂತರಿಸಿದರು.**
- **ನಮ್ಮ ಸಂಸ್ಥೆಗೆ 25 ಕೆ.ವಿ ಜನರೇಟರನ್ನು ತರಲು ದೇವರು ಕೃಪೆ ನೀಡಿದ್ದಾರೆ.**

ರಾಜನ ಕೃಪಾಸತ್ಯತೆಗಳು ಅವನನ್ನು ಕಾಯುವವು; ಅವನ ಕರುಣೆಯೇ ಅವನ ಸಿಂಹಾಸನಕ್ಕೆ ಆಧಾರ (ಜ್ಞಾನೋ. 20:28).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ತಿಳುವಳಿಕೆಯ ಸ್ವರ

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಇತರ ಭಾಷೆಗಳಲ್ಲಿ ಸತ್ಯವೇದ :** 1793 ರಲ್ಲಿ ವಿಲ್ಲಿಯಂ ಕೇರಿಯವರು ಇಂಗ್ಲೆಂಡಿನಿಂದ ಭಾರತಕ್ಕೆ ಬಂದರು. ಭಾರತದಲ್ಲಿದ್ದು ಸೇವೆ ಮಾಡುವ ಸಂದರ್ಭದಲ್ಲಿ ಅನೇಕ ಕಷ್ಟ ಸಂಕಟಗಳನ್ನು; ಎಡರು ತೊಡರುಗಳನ್ನು ಅನುಭವಿಸಿದರು. ಅವರ ಒಬ್ಬ ಮಗನು ತೀರಿಹೋದನು. ಅವರ ಹೆಂಡತಿಯು ಅಸೌಖ್ಯತೆಯಲ್ಲಿದ್ದರು, ಸ್ನೇಹಿತರಿಂದಲೂ ಸೇವೆಗೆ ಪ್ರೋತ್ಸಾಹ ದೊರಕಲಿಲ್ಲ. ಇವರ ಸೇವೆಗೆ ಯಾರಿಂದಲೂ ಆರ್ಥಿಕ ನೆರವು ದೊರಕಲಿಲ್ಲ. ಇಂಥ ಎಲ್ಲಾ ಬಿಕ್ಕಟ್ಟಿನ ಪರಿಸ್ಥಿತಿಗಳು ಇದ್ದರೂ, ಇವರು ಅನೇಕ ಭಾರತೀಯ ಭಾಷೆಗಳನ್ನು ಕಲಿತು, ಸತ್ಯವೇದವನ್ನು ಅನೇಕ ಭಾಷೆಗಳಿಗೆ ಭಾಷಾಂತರಿಸಿದರು. ಇಪ್ಪತ್ತು ವರ್ಷಗಳ ಅವಧಿಯಲ್ಲಿ ಭಾರತದ ನಾಲ್ಕು ಪ್ರಮುಖ ಭಾಷೆಗಳಿಗೆ ಸತ್ಯವೇದವನ್ನು ಭಾಷಾಂತರಿಸಿದರು. ಈ ಕೆಲಸವು ಮುಂದುವರಿಯುತ್ತಿರುವಾಗ ಅಗ್ನಿಯ ಅನಾಹುತವಾಗಿ ಅನೇಕ ಭಾಷಾಂತರದ ಪ್ರತಿಗಳು ಹಾಗೂ ಅಚ್ಚಿನ ಮೊಳೆಗಳು ಸುಟ್ಟು ಹೋದವು. ಆದರೂ ದೃತಿಗೆಡದೆ ಸಾಯುವವರೆಗೂ ಭಾಷಾಂತರದ ಕೆಲಸವನ್ನು ಮುಂದುವರಿಸುತ್ತಾ ಇದ್ದರು. ಹೆಚ್ಚು ಕಡಿಮೆ 34 ಭಾಷೆಗಳಿಗೆ ಹೊಸ ಒಡಂಬಡಿಕೆಯ ಭಾಷಾಂತರಿಸಿದ ಕರಡು ಪ್ರತಿಗಳನ್ನು ಇವರು ತಿದ್ದುಪಡಿ ಮಾಡಿರುವರು.

**ದಕ್ಷಿಣ ಭಾರತದ ಪ್ರಾಮುಖ್ಯ ಭಾಷೆಗಳಲ್ಲಿ ಸತ್ಯವೇದ :**

**ಕನ್ನಡ ಭಾಷೆ :** ಸೆರಾಂಪೂರಿನ ಮಿಶನರಿಗಳು ಸತ್ಯವೇದವನ್ನು ಕನ್ನಡ ಭಾಷೆಗೆ ಮೊದಲಾಗಿ ಭಾಷಾಂತರಿಸಲು ಪ್ರಯತ್ನಿಸಿದರು. ಕ್ರಿ.ಶ. 1809ರಲ್ಲಿ ಕನ್ನಡ ಭಾಷೆಯಲ್ಲಿ ಹೊಸ ಒಡಂಬಡಿಕೆಯನ್ನು ಭಾಷಾಂತರ ಮಾಡಲಾಯಿತು. ಆದರೆ ಅದೇ ವರ್ಷದಲ್ಲಿ ಕನ್ನಡದ ಹಸ್ತಪತ್ರಿಗಳು ಅಗ್ನಿಗೆ ಸಿಕ್ಕಿ ನಾಶವಾಯಿತು.

ಅದೇ ವರ್ಷ ಬಳ್ಳಾರಿಯಲ್ಲಿ ವಾಸಿಸುತ್ತಿದ್ದ ಲಂಡನ್ ಮಿಶನೆರಿ ಸಂಘದ ಜಾನ್ ಹಾಂಡ್ಸ್ ಎಂಬುವವರು ಕನ್ನಡ ವ್ಯಾಕರಣ ಪುಸ್ತಕವನ್ನು ಮತ್ತು ಕನ್ನಡ ನಿಘಂಟನ್ನು ತಯಾರಿಸಿ ಕನ್ನಡ ಭಾಷೆಗೆ ಸತ್ಯವೇದವನ್ನು ಭಾಷಾಂತರಿಸಲು ಪ್ರಾರಂಭಿಸಿದರು. 1812ರಲ್ಲಿ ಮೊದಲಿನ ಮೂರು ಸುವಾರ್ತೆಗಳನ್ನು ಕನ್ನಡದಲ್ಲಿ ಪ್ರಕಟಿಸಲಾಯಿತು. ಕಲ್ಕತ್ತಾದ ಸತ್ಯವೇದ ಪ್ರಸರಣಾ ಸಂಘದ ಶಾಖೆಯವರು ಆರ್ಥಿಕ ಸಹಾಯ ಕೊಟ್ಟು ಜಾನ್ ಹಾಂಡ್ಸ್‌ರವರನ್ನು ಪ್ರೋತ್ಸಾಹಿಸಿದರು. 1830ರಲ್ಲಿ ಬಳ್ಳಾರಿ ಮಿಶನ್ ಮುದ್ರಣಾಲಯದಲ್ಲಿ ಕನ್ನಡದ ಹೊಸ ಒಡಂಬಡಿಕೆಯನ್ನು ಮುದ್ರಿಸಲಾಯಿತು. ಮದ್ರಾಸಿನ ಸತ್ಯವೇದ ಪ್ರಸರಣ ಸಂಘದವರು ಈ ಹೊಸ ಒಡಂಬಡಿಕೆಯನ್ನು ಪ್ರಕಟಿಸಿದರು. ಅಸೌಖ್ಯದ ಕಾರಣ ಜಾನ್ ಹಾಂಡ್ಸ್‌ರವರು ಇಂಗ್ಲೆಂಡಿಗೆ ಹಿಂತಿರುಗಬೇಕಾಯಿತು. ಇವರ ಗೈರುಹಾಜರಿಯಲ್ಲಿ ಇವರ ಜೊತೆಗಾರನಾಗಿದ್ದ ವಿಲ್ಯಂ ರೀವ್ ಎಂಬುವವರು ಹಳೇ ಒಡಂಬಡಿಕೆಯ ಭಾಷಾಂತರವನ್ನು ಬಹುವಾಗಿ ಮುಂದುವರೆಸಿದರು. ಕನ್ನಡ ಭಾಷಾಂತರ ಸತ್ಯವೇದವನ್ನು ಏಳೆಂಟು ಬಾರಿ ಪುನರಾವರ್ತಿಸಿದರು. ಸಾಮಾನ್ಯ ಜನರಿಗೆ ಅರ್ಥವಾಗುವ ಹಾಗೆ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುವ ಕ್ರೈಸ್ತ ಬಾಂಧವರಿಗೆ ಅರ್ಥವಾಗುವಂತೆ ಕನ್ನಡ ಭಾಷಾಂತರದ ಸತ್ಯವೇದವನ್ನು ಪುನರಾವರ್ತಿಸಲಾಯಿತು. ಲಂಡನ್ ಮಿಷನರಿ ಸಂಘದ ಜೆ. ಟೈಲರ್ ಜೆ. ರೆಯಿಡ್ , ಬೆಂಜಮಿನ್ ರೈಸ್, ಈ.ಪಿ. ರೈಸ್ ವೆಸ್ಲಿಯನ್ ಮಿಶನಿನ ಹೆನ್ರಿ ಹೈ ಮತ್ತು ಬಾಸೆಲ್ ಮಿಶನಿನ ಎಚ್. ರೀಶ್ ದೊರೆಗಳವರು ಉತ್ತಮವಾದ (ಗುಣಮಟ್ಟದ) ಕನ್ನಡ ಭಾಷಾಂತರದ ಸತ್ಯವೇದಕ್ಕೆ ನಾಂದಿಯಾದರು.

ಇವರಿಗೆ ಸಹಾಯಾರ್ಥವಾಗಿ ನೀಲಕಂಠರಾಜು ಶಾಸ್ತ್ರಿ ಮತ್ತು ಪಿ. ಕರಿಬಸಪ್ಪಶಾಸ್ತ್ರಿ ಮುಂತಾದ ಹಿಂದೂ ಪಂಡಿತರು ನೆರವಾಗಿರುವರು. ಕನ್ನಡ ಭಾಷಾಂತರಕ್ಕೆ ಗೋವಾದ ಆರ್ಚ್ ಬಿಶೋಪ್‌ರವರು ಯಾವ ಉತ್ತೇಜನವನ್ನು ತೋರಿಸಲಿಲ್ಲ.

1831 ರಲ್ಲಿ ಜಾನ್ ಹಾಂಡ್ಸ್‌ರವರು ಕನ್ನಡ ಅಕ್ಷರದ ಅಚ್ಚು ಮೊಳೆಗಳೊಂದಿಗೆ ಇಂಗ್ಲೆಂಡಿನಿಂದ ಬಂದರು. ಅವರು ಕನ್ನಡಕ್ಕೆ ಭಾಷಾಂತರಿಸಿದ ಸತ್ಯವೇದವು ಪರಿಷ್ಕೃತ ಭಾಷಾಂತರದಿಂದ ಉತ್ತಮಗೊಳಿಸಲ್ಪಟ್ಟಿದೆಯೆಂದು ತಿಳಿದು ಬಹಳ ಸಂತೋಷಪಟ್ಟರು. ಪರಿಷ್ಕೃತ ಭಾಷಾಂತರಕ್ಕೆ ಮದ್ರಾಸ್ ಶಾಖೆಯು ವಿಶೇಷವಾಗಿ ಪ್ರೋತ್ಸಾಹಿಸಿತು. 1865 ರಲ್ಲಿ ಕನ್ನಡ ಭಾಷೆಯ ಪ್ರಥಮ ಸತ್ಯವೇದವು ಮುದ್ರಿಸಲ್ಪಟ್ಟು ಪ್ರಕಟಗೊಂಡಿತು. ನಂತರ 1934ರಲ್ಲಿ ಟಿಪ್ಪಣಿಗಳನ್ನೊಳಗೊಂಡ ಕನ್ನಡ ಭಾಷೆಯ ಸತ್ಯವೇದವು ಪ್ರಕಟಿಸಲ್ಪಟ್ಟಿತು.

ಚಿತ್ರದುರ್ಗದ ಒಬ್ಬ ಪ್ರಖ್ಯಾತ ಸನ್ಯಾಸಿಯು ಸುವಾರ್ತೆಗಳಲ್ಲಿ ಒಂದನ್ನು ಓದುವ ಸಂದರ್ಭ ಸಿಕ್ಕಿ ಆತನು ಸುವಾರ್ತೆಯು ಹೃದಯವನ್ನು ಬೇಧಿಸುವ ಶಕ್ತಿಯುಳ್ಳ ಖಡ್ಗದಂತಿದೆಯೆಂದು ಹೇಳಿರುವನು. ನಂತರದಲ್ಲಿ ಆತನು ಬಳ್ಳಾರಿಗೆ ಹೋಗಿ ತನಗಾಗಿ

ನೀತಿವಂತರಾದರೋ ದೇವರ ಸನ್ನಿಧಿಯಲ್ಲಿ ಹರ್ಷಿಸುವರು; ಉಲ್ಲಾಸಿಸುವರು, ಆನಂದಧ್ವನಿಮಾಡುವರು (ಕೀರ್ತ. 68:3).

ಒಂದು ಸತ್ಯವೇದವನ್ನು ಕೊಂಡುಕೊಂಡು ಓದಿ ನಂತರ ಕ್ರೈಸ್ತನಾಗಿ, ಕ್ರಿಸ್ತನ ಬಲವುಳ್ಳ ಸಾಕ್ಷಿಯಾದನಂತೆ. ಇಂದಿನ ದಿನಗಳಲ್ಲೂ ಸತ್ಯವೇದವನ್ನು ಪ್ರತಿನಿತ್ಯ ಪ್ರಾರ್ಥನಾಪೂರ್ವಕವಾಗಿ ಓದಿ ಧ್ಯಾನಿಸಿದರೆ ಪವಿತ್ರಾತ್ಮನ ಶಕ್ತಿಯು ನಮ್ಮಲ್ಲಿರುವುದು. 1865ರಲ್ಲಿ ಪ್ರಥಮವಾಗಿ ಮಂಗಳೂರಿನ ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ ಬ್ರಿಟಿಷ್ ಮತ್ತು ಅನ್ಯದೇಶೀಯ ಬೈಬಲ್ ಸೊಸೈಟಿಯ ಹಾಗೂ ಬೆಂಗಳೂರಿನ ಸತ್ಯವೇದ ಪ್ರಸರಣ ಸಮಾಜದವರ ಅಪ್ಪಣೆಯಿಂದ ಸ್ಥಾಪಿಸಲ್ಪಟ್ಟಿತು. 1865, 1877, 1884, 1905, 1915, 1922 ಮತ್ತು 1934ರ ವರೆಗೆ ಸುಮಾರು 26,000 ಕನ್ನಡ ಭಾಷೆಯ ಸತ್ಯವೇದಗಳನ್ನು ಮುದ್ರಿಸಲಾಯಿತು. ಹೀಗೆ 1934ರ ವರೆಗೆ ಏಳು ಆವೃತ್ತಿಗಳಲ್ಲಿ ಪ್ರಕಟಿಸಲಾಗಿದೆ.

ತಮಿಳು ಭಾಷೆ : ತಮಿಳು ಭಾಷಾಂತರ ಸತ್ಯವೇದಕ್ಕೆ ಮೂಲ ಕರ್ತೃಗಳಾದ ಬಾರ್ತೋಲೋಮ್ಯುಜಿಗನ್ ಬಾಣ್ ಮತ್ತು ಫಿಲಿಪ್ ಫೆಬ್ಲಿಶಿಯಸ್ (Philip Feblicius) ರವರನ್ನು ಜ್ಞಾಪಿಸಿಕೊಳ್ಳಬೇಕು. ಇವರು ಜರ್ಮನಿಯಲ್ಲಿ ಹುಟ್ಟಿದವರು. ಡೆನ್ಮಾರ್ಕಿನ ಅರಸನು ಇವರನ್ನು **"ರಾಜನ ಮಿಶನೆರಿ"**ಗಳಾಗಿ 1706ರಲ್ಲಿ ದಕ್ಷಿಣ ಭಾರತದ ಟ್ರಾಂಕುಬಾರಿಗೆ ಕಳುಹಿಸಿದನು. ಸ್ಥಳೀಯರಿಂದ ಇವರಿಗೆ ಯಾವ ಸಹಾಯವಾಗಲಿ, ಸಹಕಾರವಾಗಲಿ ಸಿಕ್ಕಲಿಲ್ಲ. ಡೇನಿಶ್ ಈಸ್ಟ್ ಇಂಡಿಯಾ ಕಂಪೆನಿಯವರು ಈ ಮಿಶನೆರಿಗಳಿಗೆ ಭಾರತದಲ್ಲಿ ತುಂಬಾ ತೊಂದರೆ ಮತ್ತು ಕಷ್ಟಗಳನ್ನು ಕೊಟ್ಟರು. ಜೆಗೆನ್ ಬಾಗ್ ಹಳ್ಳಿಯ ಶಾಲಾ ಮಕ್ಕಳೊಂದಿಗೆ ಮರಳಿನ ಮೇಲೆ ಕುಳಿತುಕೊಂಡು ತಮಿಳು ಭಾಷಾ ಪಂಡಿತರ ಸಹಾಯವಿಲ್ಲದೆ ಗ್ರಾಮೀಣ ತಮಿಳು ಭಾಷೆಯನ್ನು ಕಲಿತರು. ಇವರು ಭಾರತಕ್ಕೆ ಬಂದ ಐದು ವರ್ಷಗಳಲ್ಲಿ ಹೊಸ ಒಡಂಬಡಿಕೆಯನ್ನು ತಮಿಳು ಭಾಷೆಗೆ ಭಾಷಾಂತರಿಸಿದರು. ಇವರು ತೀರಿ ಹೋಗುವ ವರ್ಷದಲ್ಲಿ (1719) ಹಳೇ ಒಡಂಬಡಿಕೆಯಲ್ಲಿ ರೂತಳ ಪುಸ್ತಕದ ವರೆಗೆ ಭಾಷಾಂತರಿಸಿದ್ದರು. ಇವರ ತಮಿಳು ಭಾಷೆಯು ಗ್ರಾಮೀಣ ಭಾಷೆಯಾಗಿದ್ದು ಉನ್ನತ ಮಟ್ಟದ ತಮಿಳು ಭಾಷೆಯಾಗಿರಲಿಲ್ಲ.

1727 ರಲ್ಲಿ ಬೆಂಜಮಿನ್ ಶುಲ್ತೆಜರವರು (Benjamin Shultez) ಪ್ರಥಮ ತಮಿಳು ಸತ್ಯವೇದವನ್ನು ಉನ್ನತ ಶೈಲಿಯ ತಮಿಳು ಭಾಷೆಗೆ ಭಾಷಾಂತರಿಸಿ ಟ್ರಾಂಕು ಬಾರಿನಲ್ಲಿ ಪ್ರಕಟಿಸಿದರು. ಫಿಲಿಪ್ ಫೆಬ್ರಿಷಿಯಸ್‌ರವರು ಇನ್ನೂ ಉತ್ತಮವಾದ ತಮಿಳು ಸತ್ಯವೇದವನ್ನು ಭಾಷಾಂತರಿಸಿದರು. 1773 ರಲ್ಲಿ ಈತನ 20 ವರ್ಷಗಳ ಸಾಧನೆಯಿಂದ ತಮಿಳು ಭಾಷೆಯ ಹೊಸ ಒಡಂಬಡಿಕೆಯನ್ನು ಹಾಗೂ 1777ರಲ್ಲಿ ಇಡೀ ಸತ್ಯವೇದವನ್ನು ಭಾಷಾಂತರಿಸಲಾಯಿತು. 1810ರಲ್ಲಿ ಸತ್ಯವೇದ ಸಂಸ್ಥೆಯವರು ತಮಿಳು ಭಾಷೆಯಲ್ಲಿ ಸತ್ಯವೇದವನ್ನು ಪ್ರಕಟಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ರೆವೆರೆಂಡ್ ಬೆವರ್‌ರವರ ನೇತೃತ್ವದಲ್ಲಿ ಬೇರೆ ಬೇರೆ ಕ್ರೈಸ್ತ ಪಂಗಡಗಳ ಪ್ರತಿನಿಧಿಗಳು 1877ರಲ್ಲಿ ತಮಿಳು ಭಾಷೆಯ ಸತ್ಯವೇದವನ್ನು ಭಾಷಾಂತರಿಸಿದರು. ಇಂದಿಗೂ ಪ್ರೊಟೆಸ್ಟೆಂಟ್ ಕ್ರೈಸ್ತ ಪಂಗಡದವರು ಇದೇ ಸತ್ಯವೇದವನ್ನು ಉಪಯೋಗಿಸುತ್ತಿದ್ದಾರೆ. 1993ರಲ್ಲಿ ತಮಿಳು ಭಾಷೆಯ ತಿದ್ದಿದ ಆವೃತ್ತಿಯು ಪ್ರಕಟಿಸಲ್ಪಟ್ಟಿತು.

**ಮಲೆಯಾಳ ಭಾಷೆ :** ಕ್ರಿಶ್ಚಿಯನ್ ಮಿಶನೆರಿ ಸೊಸೈಟಿಯವರು ಬೆಂಜಮಿನ್ ಬೆಯಿಲಿ (Benjamin Bailey)ಯವರು ಹೊಸ ಒಡಂಬಡಿಕೆಯನ್ನು ಮಲೆಯಾಳ ಭಾಷೆಗೆ ಭಾಷಾಂತರಿಸಿದ್ದನ್ನು ಸತ್ಯವೇದ ಸಂಘದ ಮದ್ರಾಸಿನ ಶಾಖೆಯವರು 1829ರಲ್ಲಿ ಪ್ರಕಟಿಸಿದರು. 1841ರಲ್ಲಿ ಹಳೇಒಡಂಬಡಿಕೆಯು ಭಾಷಾಂತರಿಸಲ್ಪಟ್ಟು ಪ್ರಕಟವಾಯಿತು. ಆದರೆ ಈ ಭಾಷಾಂತರವು ಕೇರಳ ರಾಜ್ಯಕ್ಕೆ ಅಷ್ಟೊಂದು ಪ್ರಯೋಜನಕಾರಿಯಾಗಲಿಲ್ಲ. ಅನೇಕ ತಿದ್ದುಪಡಿಗಳನ್ನು ಮಾಡಿ 1960 ರಲ್ಲಿ ಮಲೆಯಾಳದ ಹೊಸ ಭಾಷಾಂತರದ ಸತ್ಯವೇದವು ಪ್ರಕಟವಾಯಿತು. ನಂತರ 1993 ರಲ್ಲಿ ಪುನ: ತಿದ್ದಿದ ಆವೃತ್ತಿಯು ಪ್ರಕಟಿಸಲ್ಪಟ್ಟಿತು.

**ತೆಲುಗು ಭಾಷೆ :** 1857ರಲ್ಲಿ ತೆಲುಗು ಭಾಷೆಯಲ್ಲಿ ಸತ್ಯವೇದವು ಪ್ರಕಟವಾಯಿತು. ಎರಡನೇ ಆವೃತ್ತಿಯು 1911ರಲ್ಲಿ ಪ್ರಕಟವಾಯಿತು. ಎರಡನೇ ಮಹಾಯುದ್ಧದ ನಂತರ 1953ರಲ್ಲಿ ತಿದ್ದಿದ ಮೂರನೇ ಆವೃತ್ತಿಯು ಪ್ರಕಟಿಸಲ್ಪಟ್ಟಿತು. ಇಂದಿಗೂ ಇದೇ ಭಾಷಾಂತರದ ಸತ್ಯವೇದವು ಉಪಯೋಗದಲ್ಲಿದೆ.

ಭಾಷಾಂತರದ ಕೆಲಸವು ಇಂದಿಗೂ ಮುಂದುವರಿಯುತ್ತಿದೆ. ಭಾರತೀಯ ಸತ್ಯವೇದ ಸಂಘವು (The Bible Society of India) ಸತ್ಯವೇದವನ್ನು ಇನ್ನಿತರ ಭಾಷೆಗಳಿಗೂ ಭಾಷಾಂತರಿಸುವ ಹಾಗೂ ಮುದ್ರಿಸುವ ಕೆಲಸವನ್ನು ಮುಂದುವರಿಸುತ್ತಲೇ ಇದೆ. ಭಾರತದ ಸುಮಾರು 45 ಭಾಷೆಗಳಿಗೆ ಸತ್ಯವೇದವು ಭಾಷಾಂತರಿಸಲ್ಪಟ್ಟಿದೆ ಮತ್ತು ಹೊಸ ಒಡಂಬಡಿಕೆಯು 41 ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿದೆ. ಇಷ್ಟು ಮಾತ್ರವಲ್ಲದೇ ಸತ್ಯವೇದದ ಕೆಲವು ಭಾಗಗಳು ಮತ್ತು ಆಯ್ದ ವಚನಗಳು ಇತರ ಎಂಭತ್ತೈದು ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿದೆ.

ಮುಂದುವರಿಯುವದು...

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಯೆಹೋವನೇ, ನನ್ನನ್ನು ನೆನಪುಮಾಡಿಕೊಂಡು ನಿನ್ನ ಪ್ರಜೆಗೆ ತೋರಿಸುವ ದಯೆಯನ್ನು ನನಗೂ ತೋರಿಸು (ಕೀರ್ತ. 106:4).

# ರೂತಳ ಪುಸ್ತಕ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಮಕ್ಕಳಿಗೆ ರಕ್ಷಣೆಯ ಬಗ್ಗೆ ಚೆನ್ನಾಗಿ ಕಲಿಸಿರಿ :** ತಂದೆ ತಾಯಿಯವರು ಮಕ್ಕಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡುತ್ತಾರೆ ಅದು ಒಳ್ಳೆಯ ಸಂಗತಿ. ಪ್ರತಿ ತಂದೆ ತಾಯಿಗೂ ಆಸೆ ಇದೆ ತಮ್ಮ ಮಕ್ಕಳು ಉತ್ತಮ ಶಿಕ್ಷಣ ಹೊಂದಬೇಕೆಂದು ಆದರೆ ಅತೀ ಪ್ರಾಮುಖ್ಯವಾದ ವಿಷಯ ಏನೆಂದರೆ ಈ ಲೋಕದ ಜೀವಿತದ ನಂತರದ ನಿತ್ಯ ಜೀವಿತದ ಕುರಿತು ಮಕ್ಕಳಿಗೆ ನಾವು ಚಿಕ್ಕ ವಯಸ್ಸಿನಲ್ಲೇ ಕಲಿಸಬೇಕು. ತಿಮೊಥೆಯನು ಮಾತ್ರ ಕುಟುಂಬದಿಂದ ಹುಟ್ಟಿ ಬಂದವನು ಅ.ಕೃ. 16:1–4 ಅವನ ತಂದೆ ಗ್ರೀಕನು, ತಾಯಿ ಯೆಹೂದ್ಯಳಾಗಿದ್ದಳು. ಆದರೆ ಚಿಕ್ಕಂದಿನಿಂದಲೇ ಅವನು ಸತ್ಯವೇದವನ್ನು ಚೆನ್ನಾಗಿ ಅಭ್ಯಾಸಮಾಡುತ್ತಿದ್ದನು (2 ತಿಮೊ. 3:14) ಹಾಗೂ ನಂಬಿಕೆಯಲ್ಲಿ ಬೆಳೆಯುತ್ತಿದ್ದನು ಒಂದು ದಿನ ಆತನ ಜೀವಿತದಲ್ಲಿ ಬಂತು ದೊಡ್ಡ ದೇವರ ಸೇವಕನಾಗಿ ಬದಲಾದನು.

4) **ಮಕ್ಕಳಿಗೆ ರಕ್ಷಕನ ಬಗ್ಗೆ ಚೆನ್ನಾಗಿ ಕಲಿಸಿರಿ:** ಮಹಾತ್ಮ ಗಾಂಧಿಜಿಯವರು ಯಾರು ಎಂದು ಭಾರತ ದೇಶದ ಯಾವುದೇ ಮಗುವಿಗೆ ಕೇಳಿದರೆ ಆ ಮಗು ಖಂಡಿತವಾಗಿ ಹೇಳುತ್ತದೆ ಭಾರತ ದೇಶಕ್ಕೆ ಸ್ವಾತಂತ್ರ್ಯ ಕೊಟ್ಟವರು ಎಂದು. ಅದೇ ರೀತಿ ಪಾಪದ ಶಿಕ್ಷೆಯಾದ ನಿತ್ಯ ನರಕದಿಂದಲೂ, ಪಾಪದ ಜೀವಿತದಿಂದಲೂ ಸ್ವಾತಂತ್ರ್ಯ ಕೊಡುವ ರಕ್ಷಕನಾದ ಯೇಸುಕ್ರಿಸ್ತನ ಕುರಿತು ನಮ್ಮ ಮಕ್ಕಳಿಗೆ ಸರಿಯಾಗಿ ತಿಳಿಸಬೇಕು.

5) **ಮಕ್ಕಳಿಗೆ ದೇವರಿಗೂ ಹಿರಿಯರಿಗೂ ವಿಧೇಯರಾಗುವ ಕುರಿತು ಚೆನ್ನಾಗಿ ಕಲಿಸಿರಿ:** ವಿಧೇಯತೆಯ ಗುಣ ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲಿಸಿಕೊಡಬೇಕು. ಲೂಕ. 2:51 ಕರ್ತನಾದ ಯೇಸುಕ್ರಿಸ್ತನು ತನ್ನ ತಂದೆ ತಾಯಿಗೆ ಅಧೀನನಾಗಿ ಬೆಳೆದನು ಹಾಗೆಯೇ ಬೆಳೆಯುವಂತಹ ಸಂದರ್ಭದಲ್ಲಿ ತಂದೆಯಾದ ದೇವರಿಗೂ ಅಧೀನನಾಗಿ ಜೀವಿಸಿದನು.

6) **ಮಕ್ಕಳಿಗೆ ಹಿರಿಯರಿಗೆ ಚೆನ್ನಾಗಿ ಗೌರವ ಕೊಡುವುದರ ಕುರಿತು ಕಲಿಸಿರಿ.** ತಂದೆ ತಾಯಿಯುವರು ಮನೆಯಲ್ಲಿ ಮಾತನಾಡುವಾಗ ತಮ್ಮ ಸಭಾಪಾಲಕರ ಕುರಿತು, ಹಿರಿಯರ ಕುರಿತು, ಸ್ಕೂಲ್ ಟೀಚರರ ಕುರಿತು, ತಪ್ಪಾಗಿ ಮಾತನಾಡಬಾರದು. ಇದು ಮಕ್ಕಳಲ್ಲಿ ದುಷ್ಪರಿಣಾಮವನ್ನುಂಟು ಮಾಡುತ್ತದೆ. Sory, thanks, welcome, good morning ಚಿಕ್ಕ ಚಿಕ್ಕ ಪದಗಳನ್ನು ಉಪಯೋಗಿಸಲು ಚಿಕ್ಕಂದನಿಂದಲೇ ಕಲಿಸಿಕೊಡಬೇಕು.

7) **ಮಕ್ಕಳಿಗೆ ಪರಿಶುದ್ಧ ಜೀವಿತ ನಡೆಸುವುದರ ಬಗ್ಗೆ ಕಲಿಸಿರಿ :**

**ಮಕ್ಕಳಿಗೆ ಕಲಿಸಬೇಕಾದ ಸಂಗತಿಗಳು :**

1. ನಮ್ಮ ದೇವರು ಪರಿಶುದ್ಧನು
2. ನಮ್ಮ ದೇಹವು ದೇವರ ಆಲಯ
3. ನಮ್ಮ ನಡತೆ ಪರಿಶುದ್ಧವಾಗಿರಬೇಕು
4. ನಮ್ಮ ಜೀವಿತ ಪರಿಶುದ್ಧವಾಗಿರಬೇಕು
5. ನಮ್ಮ ರಹಸ್ಯ ಜೀವಿತ ಪರಿಶುದ್ಧವಾಗಿರಬೇಕು
6. ನಮ್ಮ ಆರಾಧನೆ ಪರಿಶುದ್ಧತೆಯಿಂದ ಕೂಡಿರಬೇಕು
7. ದೋಷವಿಲ್ಲದ ಜೀವಿತ ದೇವರ ಮುಂದೆಯೂ ಮನುಷ್ಯರ ಮುಂದೆಯೂ ನಡೆಸಬೇಕು.

3) **ನ್ಯಾಯ. 2:11–23 ವಿಗ್ರಹಾರಧಕರಾದರು :** ಸತ್ಯವೇದವನ್ನು ಚೆನ್ನಾಗಿ ಕಲಿಯುವುದಾದರೆ ನಮ್ಮ ದೇವರು ವಿಗ್ರಹಾರಧನೆಯನ್ನು ತುಂಬಾ ದ್ವೇಷ ಮಾಡುತ್ತಾನೆಂದು ಮಾತ್ರವಲ್ಲದೆ ಅಂಥ ವ್ಯಕ್ತಿಗಳನ್ನು ಶಿಕ್ಷಿಸುತ್ತಾನೆಂದು ತಿಳಿದುಕೊಳ್ಳಬಹುದು. ನಮ್ಮನ್ನು ಸೃಷ್ಟಿ ಮಾಡಿದ ದೇವರು ಜೀವಸ್ವರೂಪನಾದ್ದರಿಂದ ನಾವು ಯಾವುದೇ ಮನುಷ್ಯನ, ಪಕ್ಷಿಯ, ಪ್ರಾಣಿಯ ಅಥವಾ ಮೀನಿನ ಮೂರ್ತಿಮಾಡಿ ಇದು ದೇವರೆಂದು ನಂಬಿ ಆರಾಧಿಸಿದರೆ ಜೀವಿಸುವ ದೇವರ ಕೋಪಕ್ಕೆ ಗುರಿಯಾಗುತ್ತೇವೆಂದು ಸತ್ಯವೇದದ ಮೂಲಕ ತಿಳಿದುಕೊಳ್ಳಬಹುದು ಮತ್ತು ದೇವರು ಸೃಷ್ಟಿಸಿದ ಗಿಡ, ಮರ, ಕಲ್ಲು, ಸೂರ್ಯ, ಚಂದ್ರ, ನಕ್ಷತ್ರ, ಆಕಾಶ ಇವೆಲ್ಲವನ್ನು ದೇವರೆಂದು ಪೂಜಿಸಬಾರದೆಂದು ಸತ್ಯವೇದ

ಯೆಹೋವನು ನನ್ನ ನೀತಿಗೆ ಸರಿಯಾಗಿ ಮೇಲುಮಾಡಿದನು; ನನ್ನ ಕೈಗಳ ಶುದ್ಧತ್ವಕ್ಕೆ ತಕ್ಕಂತೆ ಪ್ರತಿಫಲಕೊಟ್ಟನು (ಕೀರ್ತ. 18:20).

ಎಚ್ಚರಿಸುತ್ತದೆ. **"ಹೋರೇಬಿನಲ್ಲಿ ಯೆಹೋವನು ಬೆಂಕಿಯ ಜ್ವಾಲೆಯೊಳಗಿಂದ ನಿಮ್ಮ ಸಂಗಡ ಮಾತಾಡಿದಾಗ ನಿಮಗೆ ಯಾವ ಆಕಾರವೂ ಕಾಣಿಸಲಿಲ್ಲವಷ್ಟೇ. ಆದದರಿಂದ ನೀವು ನಿಮ್ಮ ನಿಮ್ಮ ಮನಸ್ಸುಗಳನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ನೀವು ಸ್ತ್ರೀ ಪುರುಷರ ರೂಪವನ್ನಾಗಲಿ, ಭೂಮಿಯ ಮೇಲೆ ಸಂಚರಿಸುವ ಮೃಗದ ರೂಪವನ್ನಾಗಲಿ, ಆಕಾಶದಲ್ಲಿ ಹಾರಾಡುವ ಪಕ್ಷಿಯ ರೂಪವನ್ನಾಗಲಿ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳ ರೂಪವನ್ನಾಗಲಿ ಭೂಮಿಯ ಕೆಳಗಣ ನೀರಿನಲ್ಲಿರುವ ಮೀನಿನ ರೂಪವನ್ನಾಗಲಿ ದೇವರ ಸ್ವರೂಪವೆಂದು ಮಾಡಿಕೊಂಡು ಭ್ರಷ್ಟರಾಗಬಾರದು. ನಿಮ್ಮ ದೇವರಾದ ಯೆಹೋವನು ಭೂಲೋಕದಲ್ಲಿರುವ ಬೇರೆ ಎಲ್ಲಾ ಜನಾಂಗಗಳಿಗೋಸ್ಕರ ದಯಪಾಲಿಸಿದ ಸೂರ್ಯ ಚಂದ್ರ ನಕ್ಷತ್ರಗಳೆನಿಸಿಕೊಳ್ಳುವ ಆಕಾಶ ಸೈನ್ಯವನ್ನು ನೀವು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವಾಗ ಮರುಳುಗೊಂಡು ಅವುಗಳನ್ನು ಪೂಜಿಸಲೂಬಾರದು ನಮಸ್ಕರಿಸಲೂ ಬಾರದು"** (ಧರ್ಮೋ. 4:15–18). ದೇವರು ಸೃಷ್ಟಿಕರ್ತನು ಆದುದರಿಂದ ನಾವು ದೇವರು ಸೃಷ್ಟಿಮಾಡಿದ ಸೃಷ್ಟಿಯನ್ನು ದೇವರೆಂದು ಪೂಜಿಸಬಾರದು. ಸೃಷ್ಟಿ ಕರ್ತನು ಮಾತ್ರ ಆರಾಧನೆಗೆ, ಮಹಿಮೆಗೆ ಸಕಲ ಸ್ತುತಿ ಸ್ತೋತ್ರಕ್ಕೆ ಯೋಗ್ಯನಾಗಿದ್ದಾನೆ. ದೇವರು ನಮ್ಮನ್ನು ಸೃಷ್ಟಿಸಿದ್ದರಿಂದ ನಾವು ದೇವರನ್ನು ಉಂಟುಮಾಡಲು ಸಾಧ್ಯವಿಲ್ಲ. ಆತನು ಆತ್ಮ ಸ್ವರೂಪನಾಗಿದ್ದಾನೆ. ಯಾವುದೇ ಆತ್ಮಕ್ಕೆ ರೂಪವಿಲ್ಲ. **"ದೇವರು ಆತ್ಮ ಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು"** (ಯೋಹಾ. 4:24).

ಅ.ಕೃ. 17:25 ತಾನೇ ಎಲ್ಲರಿಗೂ ಜೀವಶ್ವಾಸ ಮುಂತಾದ್ದಲ್ಲೆವನ್ನು ಕೊಡುವವನಾಗಿರಲಾಗಿ ಕೊರತೆ ಇದ್ದವನಂತೆ ಮನುಷ್ಯರ ಕೈಗಳಿಂದ ಸೇವೆ ಹೊಂದುವವನೂ ಅಲ್ಲ. **"ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ. ನಿಮ್ಮ ಕವಿಗಳಲ್ಲಿಯೂ ಕೆಲವರು ನಾವು ಆತನ ಸಂತಾನದವರೇ ಎಂಬದಾಗಿ ಹೇಳಿದ್ದಾರೆ. ನಾವು ದೇವರ ಸಂತಾನದವರಾಗಿದ್ದ ಮೇಲೆ ದೈವವು ಮನುಷ್ಯನ ಶಿಲ್ಪವಿದ್ಯೆಯಿಂದಲೂ ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ ಬೆಳ್ಳಿ ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು"** (ಅ.ಕೃ. 17:28–29).

ನಾವು ದೇವರಿಗೆ ಕೊಡುವ ಗೌರವವನ್ನು ವಿಗ್ರಹಗಳಿಗೂ ಕಲ್ಲುಮರಗಳಿಗೂ ಕೊಟ್ಟರೆ ದೇವರು ಕೋಪಗೊಳ್ಳುತ್ತಾನೆ. ಉದಾಹರಣೆಗೆ ಒಂದು ಹಂದಿಯ ಅಥವಾ ದನದ ಯಾವುದೇ ಪ್ರಾಣಿ ಅಥವಾ ಪಕ್ಷಿಯ ಅಥವಾ ಯಾವುದೇ ಒಬ್ಬ ಮನುಷ್ಯನ ರೂಪವನ್ನು ಮಾಡಿ ಅದಕ್ಕೆ ನಿಮ್ಮ ಹೆಸರನ್ನಿಟ್ಟು ಕರೆದರೆ ನಿಮಗೆ ನೋವಾಗುವುದಿಲ್ಲವಾ? ಅದೇ ರೀತಿ ದೇವರ ಮಹಿಮೆಯನ್ನು ದೇವರು ಸೃಷ್ಟಿಸಿದ ಯಾವುದೇ ಸೃಷ್ಟಿಗೂ ಹೋಲಿಸಲು ಸಾಧ್ಯವಿಲ್ಲ.

ಮುಂದುವರಿಯುವದು........

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ವಿಶೇಷ ಕೂಟಗಳು

**ದಿನಾಂಕ 21 ಸೆಪ್ಟೆಂಬರ್ 2012 ರಿಂದ 23ಸೆಪ್ಟೆಂಬರ್‌ವರೆಗೆ ಬೇತೇಲ್ ಚರ್ಚ್ ಶಂಕರ್‌ಪುರದಲ್ಲಿ ಸೇವಕರಾದ ಮೋಸಸ್ ಒರ್ಝೋ ರವರ ವಿಶೇಷ ಪ್ರಾರ್ಥನಾ ಕೂಟವನ್ನು ಏರ್ಪಡಿಸಲಾಗಿದೆ. ತಮಗೆಲ್ಲರಿಗೂ ಆದರದ ಸ್ವಾಗತವನ್ನು ಬಯಸುವ ಬೇತೇಲ್ ಚರ್ಚ್ ಶಂಕರಪುರ.**

ಯೆಹೋವನೇ, ನಿನ್ನ ಪ್ರೀತಿಯು ಆಕಾಶದಷ್ಟು ಉನ್ನತವಾಗಿದೆ; ನಿನ್ನ ನಂಬಿಗಸ್ತಿಕೆಯು ಮೇಘಮಾರ್ಗವನ್ನು ಮುಟ್ಟುತ್ತದೆ (ಕೀರ್ತ. 36:5).

# TESTIMONY



Praise the Lord. Let everything that has breath praise the lord. ( Psa 150:6)

We want to praise our Lord and savior for the wonderful things He has done in our life. Bless the Lord oh my soul and all that is within me bless his holy name. (Psa 103 : 1,2)

1. On 25th June my father Samuel was admitted to the hospital in Hyderabad with blood clots in his legs. Doctors tried their best and said it is out of their hands. I was helpless and nowhere to go as I was in Dubai. Immediately I had called Pr. Sunil who was in Bahrain at that time. He immediately prayed over the phone and told me not to worry, as God is going to heal my father. We trust in god the maker of heaven and earth, "The earth is the Lord's, and everything in it, the world, and all who live in it " ( Psa 24:1) and reached our new home (God graciously gave us) in Shankarpura on 29th June. Soon after I reach home I called my father who was in Hyderabad hospital and surprised to know that he was out of danger and ready to travel from Hyderabad to Mangalore. After four days he reached Shankarpura on a wheel chair. We took him to the Bethel church on a wheel chair where Pr. Sunil prayed over him. After that he started to walk on his own without any support and travelled back to Hyderabad. All Glory belongs to our living savior.
2. On 13th July my mother Lilly started vomiting felt very sick. We took her to the hospital in Kaup, who refused to admit her

ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು
(ಕೀರ್ತ. 37:4).

and told us to take her to the bigger hospital. Immediately we took her to the Hi Tech hospital in Udupi. Doctors checked her condition and admitted her in the ICU. They did so many tests and gave her the powerful medicines. But my mother's condition was not at all improved until evening. Pr. Sunil and Pr. Mathew uncle was with us in the hospital praying for my mother and talking to the doctors. Whole church was in fasting prayers for my mother. By evening doctors give up on my mother and there was no hope. Praise be to our living God. Even the nursing mother may forget her child, but our father in heaven never forgets us. Immediately Pr. Sunil spoke to the doctors and shifted my mother to Manipal Hospital. Again the doctors there did all the tests and put her in ICU. They have suspected Intestinal Gangrene, Kidney and liver failure, and wanted to do immediate surgery. Doctor told us that my mother may live for 4-5 hours, and there is only 5% chance of living even after doing the surgery. Church was praying for my mother continuously, and Pr. Dill from Dubai called at the same time and prayed over the phone. Doctors did the surgery on 14th early morning and could not found anything wrong inside her. God healed her completely before doctors could do the surgery. After the surgery they did so many tests to find out what was wrong with her, but in vain. Our Lord Jesus who shed his blood for all humanity healed my mother completely. She recovered very fast and discharged from the hospital on 24th July. Once again all Glory belongs to none other than our living Saviour.

We want to thank the church especially Pr. Sunil and family for your continuous prayers and support.

**- Br. Vijay, Sophia**
& family.

**ನಮ್ಮ ಸಂಸ್ಥೆಗೆ 25 ಕೆ.ವಿ ಜನರೇಟರನ್ನು ತರುವಂತೆ ದೇವರು ಸಹಾಯಮಾಡಿದ್ದಾರೆ.
ಇದಕ್ಕಾಗಿ ಪ್ರಾರ್ಥಿಸಿ, ಸಹಾಯ ಮಾಡಿದ ಪ್ರತಿಯೊಬ್ಬರಿಗೂ
ಡಿಜಿಎಮ್ ಬೇತೇಲ್ ಸಭೆಯ ವತಿಯಿಂದ ಹೃತ್ಪೂರ್ವಕವಾದ ವಂದನೆಗಳು.
"ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು, ಬಹು ದಿನದ ಮೇಲೆ ಅದು ನಿನಗೆ
ಸಿಕ್ಕುವದು". ಪ್ರಸಂಗಿ 11:1. ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.**

ನನ್ನ ಕಾಲನ್ನು ಜಿಂಕೆಯ ಕಾಲಿನಂತೆ ಚುರುಕುಮಾಡುತ್ತಾನೆ; ನನ್ನನ್ನು ಉನ್ನತಪ್ರದೇಶಗಳಲ್ಲಿ ನಿಲ್ಲಿಸುತ್ತಾನೆ
(ಕೀರ್ತ. 18:33).

## ಯೌವನಸ್ಥರ ಸ್ವರ

# ಪುನರ್‌ಸ್ಥಾಪನೆ

ಕ್ರಿಸ್ತನಲ್ಲಿ ನನ್ನ ಪ್ರೀತಿಯ ಯೌವನಸ್ಥರಿಗೆ ಅತಿಬೇಗನೆ ಬರುವ ಯೇಸು ಕ್ರಿಸ್ತನ ಸುಮಧುರ ನಾಮದಲ್ಲಿ ವಂದನೆಗಳು.

ಕಳೆದ ಅನೇಕ ತಿಂಗಳುಗಳಿಂದ ಧ್ಯಾನಿಸುತ್ತಿರುವ ವಿಷಯವೇನೆಂದರೆ ಪುನರ್‌ಸ್ಥಾಪನೆಯ ಕುರಿತು. ನಾವು ಅನೇಕ ಭಾರಿ ಹೀಗೆ ಯೋಚಿಸುತ್ತೇವೆ ನಮ್ಮ ಈಗಿನ ಪರಿಸ್ಥಿತಿಯನ್ನು, ಹೋರಾಟವನ್ನು, ವೈಯಕ್ತಿಕ ಜೀವಿತದಲ್ಲಿ ಹಾಗೂ ಆತ್ಮೀಕ ಜೀವಿತದಲ್ಲಿ ಮತ್ತು ಲೌಕಿಕವಾಗಿ ಇರುವ ಎಲ್ಲಾ ಸ್ಥಿತಿಗತಿಗಳನ್ನು ನೋಡಿ ನನ್ನ ಈ ಜೀವಿತದಲ್ಲಿ ಹೋರಾಡುತ್ತಿರುವ ಹೋರಾಟದಿಂದ, ಪುನಃ ಪುನಃ ಎಡವಿ ಬೀಳುತ್ತಿರುವ ನನ್ನನ್ನು ಯಾರು ನಿಲ್ಲಿಸುತ್ತಾರೆ ಹಾಗೂ ನನ್ನ ಜೀವಿತವನ್ನು ಪುನರ್‌ಸ್ಥಾಪಿಸುವಾತನು ಯಾರಾಗಿದ್ದಾರೆಂದು ಅನೇಕ ಪ್ರಶ್ನೆಗಳನ್ನು ಹಾಕಿಕೊಂಡು ನೀವು ಕುಳಿತ್ತಿರಬಹುದು. ಆದರೆ ಒಂದು ಸತ್ಯವಾದ ಸಂಗತಿಯೇನೆಂದರೆ ಕ್ರಿಸ್ತನೊಂದಿಗಿನ ನನ್ನ ಸಂಬಂಧ ಹೇಗೆ ಇದೆ? ನಾನು ಆತನೊಂದಿಗೆ ಹೇಗೆ ನಡೆದು ಕೊಳ್ಳುತ್ತಿದೇನೆ? ಅಥವಾ ನಾನು ಆತ್ಮೀಕವಾಗಿ ಮುಂದುವರೆಯುತ್ತಿದ್ದೇನಾ, ಇಲ್ಲವಾ ಎಂಬುವುದನ್ನು ಮೊದಲನೆಯದಾಗಿ ಮನದಟ್ಟು ಮಾಡಿಕೊಳ್ಳಬೇಕು. ಯಾಕೆಂದರೆ ಅನೇಕ ಸಲ ನಾವು ಕ್ರಿಸ್ತನನ್ನು ಬಿಟ್ಟು ದೂರಹೋಗಿರುತ್ತೇವೆ ಮತ್ತು ಆತನಲ್ಲಿನ ಸಂಬಂಧವನ್ನು ಕಳೆದುಕೊಂಡಿರುತ್ತೇವೆ. ದೇವರ ವಾಕ್ಯದಲ್ಲಿ ಈ ಪ್ರಕಾರ ನಾವು ನೋಡಬಹುದು **"ಮನುಷ್ಯನು ಮೂರ್ಖತನದಿಂದ ತನ್ನ ಗತಿಯುನ್ನು ಕೆಡಿಸಿಕೊಂಡು ಯೆಹೋವನ ಮೇಲೆ ಕುದಿಯುವನು."** (ಜ್ಞಾನೋ 19:3) ಅನೇಕ ಭಾರಿ ಈ ಪ್ರಕಾರವಾಗಿಯೇ ಕೆಲವೊಬ್ಬರ ಜೀವಿತದಲ್ಲಿ ತಮಗೆ ಇಷ್ಟಬಂದ ರೀತಿಯಲ್ಲಿ ಜೀವನ ನಡೆಸುತ್ತಾರೆ ನಂತರ ಯಾವುದೋ ಸಮಸ್ಯೆಯಲ್ಲಾಗಲಿ, ಕಷ್ಟದಲ್ಲಿಯಾಗಲಿ ಬಿದ್ದು ಹೋದರೆ ದೇವರನ್ನೆ ದೂಷಿಸುತ್ತಾ ಇರುತ್ತಾರೆ. ಆದರೆ ನನ್ನ ಪ್ರಿಯ ಯೌವನಸ್ಥರೇ ನಾವು ಮೊದಲನೇಯದಾಗಿ ತಿಳಿದು ಕೊಳ್ಳಬೇಕು ಏನೆಂದರೆ ನಾನು ಮಾಡುವ ಎಲ್ಲಾ ಕೆಲಸದ ಮೂಲಕ ಹಾಗೂ ನನ್ನ ಜೀವಿತದ ಮೂಲಕ ಕರ್ತನು ಮಹಿಮೆಯನ್ನು ಹೊಂದುತ್ತಾ ಇದ್ದಾನಾ ? ಅಥವಾ ನನ್ನ ಜೀವಿತದ ಮೂಲಕ ದೇವರ ನಾಮು ದೂಷಣೆಗೆ ಗುರಿಯಾಗುತ್ತಾ ಇದೆಯೋ ? ಎಂದು ನಾವು ಮೊದಲು ಅಥೈಸಿಕೊಳ್ಳಬೇಕು. ಸತ್ಯವೇದದಲ್ಲಿ ಅನೇಕ ದಾಖಲೆಗಳನ್ನು ನಾವು ನೋಡುತ್ತೇವೆ. ಅನೇಕ ಭಕ್ತರು ತಮ್ಮ ಜೀವಿತದಲ್ಲಿ ಯಾವ ಸಂಗತಿ ಮಾಡುವವದಾದರೂ ದೇವರಿಗೆ ಮಹಿಮೆ ತರುವಂತಹ ಕೆಲಸವನ್ನೇ ಮಾಡುತ್ತಿದ್ದರೆಂದು ಸತ್ಯವೇದ ಮೂಲಕ ಓದಿ ತಿಳಿಯಬಹುದು. ಉದಾ : ಹನೋಕನು, ಅಬ್ರಹಾಮ,ಇಸಾಕ್,ಯೋಸೇಫನು,ಮೋಶೆ, ದಾವೀದನು, ದಾನಿಯೇಲ................. ಇನ್ನು ಅನೇಕ ಭಕ್ತರ ಜೀವನ ಚರಿತ್ರೆಯನ್ನು ನಾವು ನೋಡಿ ಧ್ಯಾನಿಸುವದಾದರೆ ಅವರು ಮಾಡುವ ಒಂದೊಂದು ಕೆಲಸದಲ್ಲಿಯೂ ದೇವರ ನಾಮವನ್ನು ಉನ್ನತಿಗೆ ತರುತ್ತಿದ್ದರು....................

ಕರ್ತನಾದ ದೇವರು ನಿಮ್ಮನ್ನು ಹೇರಳವಾಗಿ
ಆಶೀರ್ವದಿಸಲಿ.

ಕ್ರಿಸ್ತನಲ್ಲಿ ನಿಮ್ಮ ಆತ್ಮೀಯ ಸೇವಕ,
**ಪಾ|| ಜಾನ್ ಸ್ಟೀಫನ್ ಮೊಂತೆರೋ**
ಕೋರಮಂಗಲ, ಬೆಂಗಳೂರು

---

## ಮನೆ ರುಚಿ

### ಒಬ್ಬಟ್ಟು

ಸಾಮಾಗ್ರಿ: ತೆಂಗಿನ ತುರಿ–1, ಸಕ್ಕರೆ ಅಥವಾ ಬೆಲ್ಲ–1ಪಾವು, ಚಿರೋಟಿ ರವೆ–1ಪಾವು, ರಿಫೈನ್ಡ್ ಆಯಿಲ್–ಕಾಲು ಕಪ್

ವಿಧಾನ : ತೆಂಗಿನ ತುರಿಗೆ ಬೆಲ್ಲ ಅಥವಾ ಸಕ್ಕರೆ ಬೆರೆಸಿ, ಸಣ್ಣ ಉರಿಯಲ್ಲಿ ಕೆದಕುತ್ತಾ ಹೂರಣಮಾಡಿಟ್ಟುಕೊಳ್ಳಿ. ಚಿರೋಟಿ ರವೆಯ ಕಣಕ ತಯಾರಿಸಿ ಎಣ್ಣೆಯಲ್ಲಿ ನಾದಿ ಸಿದ್ಧಮಾಡಿಕೊಳ್ಳಿ. ಕಣಕ 1 ತಾಸು ನೆನೆಯಬೇಕು. ನಂತರ ಬಾಳೆ ಎಲೆಯ ಮೇಲೆ ಕಣಕ ತಟ್ಟಿ ಅದರ ಮೇಲೆ ಹೂರಣ ಇಟ್ಟು ಉಂಡೆ ಮಾಡಿ. ಗುಂಡಗೆ ತಟ್ಟಿ, ನಿಧಾನವಾಗಿ ತವ ಮೇಲೆ ಸಣ್ಣ ಉರಿಯಲ್ಲಿ ಬೇಯಿಸಿ ತೆಗೆಯಿರಿ. (ಈ ಅಳತೆಗೆ ಸುಮಾರು 12 ಒಬ್ಬಟ್ಟುಗಳನ್ನು ತಯಾರಿಸಬಹುದು).

---

ಯೆಹೋವನೇ, ನಿನ್ನ ನ್ಯಾಯಕಾರ್ಯಗಳು ತೋರತಕ್ಕ ಮಾರ್ಗದಲ್ಲಿ ನಿನ್ನನ್ನು ಕಾದುಕೊಂಡಿದ್ದೇವೆ
(ಯೆಶಾ. 26:8).